# ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುಸೂಚಿಗಳು

## ಗ್ರಾಮ ಸಭಾ

1. **ಸಾಮಾನ್ಯ**
    1) ಗ್ರಾಮ ಸಭೆಯು ತನ್ನ ಗ್ರಾಮ ಪಂಚಾಯತ್‌ನ ಮುನ್ನೋಟದ ಮತ್ತು ವಾರ್ಷಿಕ ಯೋಜನೆ ತಯಾರಿಸುವುದು ಮತ್ತು ಅದರ ಅನುಷ್ಟಾನ ಮತ್ತು ನಿರ್ವಹಣೆ ಹಾಗೂ ಅಗತ್ಯವಿದ್ದಾಗ ಅದರ ವಿಮರ್ಶೆ ನಡೆಸತಕ್ಕದ್ದು.
    2) ಕ್ರಮ ಸಂಖ್ಯೆ 1ರ ನೆಲೆಯಲ್ಲಿ ಗ್ರಾಮ ಸಭೆಯು ನುರಿತ, ಅನುಭವಿ ತಜ್ಞರ ಸಮಿತಿ ರಚಿಸಲು ಅಧಿಕಾರ ಹೊಂದಿದೆ.
    3) ಎಲ್ಲಾ ಫಲಾನುಭವಿ ಆಧಾರಿತ ಯೋಜನೆ ಕಾರ್ಯಕ್ರಮಗಳ ಫಲಾನುಭವಿ ಆಯ್ಕೆಗಳನ್ನು ತನ್ನ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆಯ್ಕೆ ಮಾಡುವ ಅಧಿಕಾರ ಗ್ರಾಮ ಸಭೆಯೆ ಮಾಡತಕ್ಕದ್ದು.

2. **ಕೃಷಿ, ತೋಟಗಾರಿಕೆ ಮತ್ತು ರೇಶ್ಮೆ**
    1) ಯೋಜನೆ ತಯಾರಿಯಲ್ಲಿ ಭಾಗವಹಿಸುವಿಕೆ ಮತ್ತು ಅಂತಿಮ ಯೋಜನೆಗೆ ಅಂಗೀಕಾರ

3. **ಸಣ್ಣ ನೀರಾವರಿ**
    1) ಸಣ್ಣ ನೀರಾವರಿ ಅಭಿವೃದ್ಧಿ, ಕಾಲುವೆ ಹಾಗೂ ನೀರಿನ ನಿರ್ವಹಣೆ
    2) ಗ್ರಾಮ ಪಂಚಾಯತ್‌ನ ಸಣ್ಣ ನೀರಾವರಿ ಯೋಜನೆ ನಿರ್ವಹಣೆಗೆ ಅಂಗೀಕಾರ ನೀಡುವುದು.
    3) ಫಲಾನುಭವಿಗಳ ಸಮಿತಿ ರಚನೆ

4. **ಎಲ್ಲಾ ಪಶು ಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಣಿ ಮತ್ತು ಮೀನುಗಾರಿಕೆ**
    1) ಪಶು ಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಣಿ ಮತ್ತು ಮೀನುಗಾರಿಕೆಯ ಸಮಗ್ರ ಹಾಗೂ ವಾರ್ಷಿಕ ಯೋಜನೆಯ ತಯಾರಿ ಮತ್ತು ಅಂಗೀಕಾರ

5. **ಸಾಮಾಜಿಕ ಅರಣ್ಯ ಕಿರು ಅರಣ್ಯ ಮತ್ತು ಜೀವ ವೈವಿಧ್ಯದ ಯೀಜನೆ, ತಯಾರಿ ಅಂಗೀಕಾರ ಅನುಷ್ಠಾನ ಮತ್ತು ನಿರ್ವಹಣೆ**
    1) ಗ್ರಾಮ ಪಂಚಾಯತ್‌ನ ಸಾಮಾಜಿಕ ಅರಣ್ಯ ಮತ್ತು ಕಿರು ಅರಣ್ಯಗಳ ಯೋಜನೆಗಳ ತಯಾರಿ ಮತ್ತು ಅಂಗೀಕಾರ, ಅನುಷ್ಠಾನ. ನಿರ್ವಹಣೆ
    2) ಗ್ರಾಮ ಪಂಚಾಯತ್ ಅರಣ್ಯ ನಿರ್ವಹಣೆ ಸಮಿತಿ ರಚನೆ
    3) ಗ್ರಾಮದ ಜೀವ ವೈವಿಧ್ಯ ನಿರ್ವಹಣಾ ಸಮಿತಿ ರಚನೆ
    4) ಗ್ರಾಮ ಪಂಚಾಯತ್‌ನ ಜೀವ ವೈವಿಧ್ಯ ರಿಜಿಸ್ಟರ್ ದಾಖಲಾತಿ ತಯಾರಿಯಲ್ಲಿ ಭಾಗವಹಿಸುವುದು
    5) ಗ್ರಾಮ ಪಂಚಾಯತ್‌ನ ಜೀವ ವೈವಿಧ್ಯ ರಕ್ಷಣೆ, ಪಾಲನೆ ಯೋಜನೆ ತಯಾರಿಯಲ್ಲಿ ಭಾಗವಹಿಸುವುದು.

6. **ಸಾಮಾಜಿಕ ನ್ಯಾಯ**

1) ಬದಿಗೊತ್ತಲ್ಪಟ್ಟ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮಹಿಳೆ, ಮಕ್ಕಳು, ಹಿರಿಯ ನಾಗರಿಕರು, ಅಂಗವಿಕಲ ಬೇರೆ ಅಲ್ಪಸಂಖ್ಯಾತರು, ಸಾಮಾಜಿಕ ಸೌಲಭ್ಯ ವಂಚಿತರುಇವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು, ಕಾರ್ಯಕ್ರಮ, ಯೋಜನೆ ತಯಾರಿ ಮತ್ತು ಅಂಗೀಕಾರ.

7. **ಪ್ರವಾಸೋದ್ಯಮ**

1) ಗ್ರಾಮ ಪಂಚಾಯತ್‌ನ ನಿರ್ದಿಷ್ಟ ಪ್ರವಾಸೋದ್ಯಮದ ಗುರುತಿಸುವುದು.
2) ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಪ್ರವಾಸೋದ್ಯಮ ಯೋಜನೆ ತಯಾರಿ ಮತ್ತು ಅಂಗೀಕಾರ

8. **ಸಣ್ಣ ಕೈಗಾರಿಕೆ ಮತ್ತು ಗ್ರಾಮೀಣ ಕೈಗಾರಿಕೆ**

1) ಗ್ರಾಮ ಪಂಚಾಯತ್ ನಿರ್ದಿಷ್ಠ ಕೈಗಾರಿಕೆ, ಗ್ರಾಮೀಣ ಕೈಗಾರಿಕೆ, ಸಣ್ಣ ಕೈಗಾರಿಕಾ ಯೋಜನೆಗ ತಯಾರಿ ಹಾಗೂ ಅಂಗೀಕಾರ.

9. **ಗ್ರಾಮೀಣ ವಸತಿ**

1) ಗ್ರಾಮೀಣ ವಸತಿ ಯೋಜನೆಗಳನ್ನು ವಿಸ್ತರಿಸಲು ಅರ್ಹ ಫಲಾನುಭವಿ ಕುಟುಂಬಗಳ ಆಯ್ಕೆ
2) ಗ್ರಾಮೀಣ ವಸತಿ ಯೋಜನೆ ತಯಾರಿ ಮತ್ತು ಅದರ ಅಂಗೀಕಾರ

10. **ಕುಡಿಯುವ ನೀರು**

1) ಕುರಿಯುವ ನೀರಿನ ಅಭಾವ ಪ್ರದೇಶಗಳ ಗುರುತಿಸುವಿಕೆ.
2) ಕುಡಿಯುವ ನೀರು ಪೂರೈಕೆಯ ಯೋಜನೆ ತಯಾರಿ ಮತ್ತು ಅಂಗೀಕಾರ,

11. **ಸಾರ್ವಜನಿಕ ಕಾಮಗಾರಿ ಮತ್ತು ಗ್ರಾಮಾಂತರ ಯೋಜನೆ**

1) ಸಮಗ್ರ ಗ್ರಾಮೀಣ ಯೋಜನೆ ತಯಾರಿ ಮತ್ತು ಅಂಗೀಕಾರ
2) ಲೋಕೋಪಯೋಗಿ ಕಾಮಗಾರಿಗಳ ಆಯ್ಕೆ

12. **ಗ್ರಾಮೀಣ ವಿದ್ಯುದೀಕರಣ ಅಥವಾ ವಿದ್ಯುತ್ ಮತು ಶಕ್ತಿ**

1) ಗ್ರಾಮೀಣ ವಿದ್ಯುದೀಕರಣ ಮತ್ತು ಪರ್ಯಾಯ ಇಂಧನ ಮತ್ತು ಪರ್ಯಾಯ ಶಕ್ತಿ ಯೋಜನೆ ತಯಾರಿ ಮತ್ತು ಅಂಗೀಕಾರ

13. **ಬಡತನ ನಿವಾರಣೆ**

1) ಸರ್ಕಾರದ ವಿವಿಧ ಬಡತನ ನಿವಾರಣಾ ಯೋಜನೆಗೆ ಫಲಾನುಭವಿಗಳ ಗುರುತಿಸುವುದು.
2) ಗ್ರಾಮ ಪಂಚಾಯತ್ ಬಡತನ ನಿವಾರಣಾ ಯೋಜನೆ ತಯಾರಿ ಮತ್ತು ಅಂಗೀಕಾರ
3) ಬಡತನ ರೇಖೆಗಿಂತ ಕೆಳಗಿರುವ ಬಡವರ ಪಟ್ಟಿ ತಯಾರಿ ಮತ್ತು ಅಂಗೀಕಾರ

14. **ಸಾಮಾಜಿಕ ವಿತರಣಾ ವ್ಯವಸ್ಥೆ**

1) ಗ್ರಾಮ ಪಂಚಾಯತ್ ಆಹಾರ ಭದ್ರತಾ ಸಮಿತಿ ರಚನೆ ಮತ್ತು ಪ್ರತಿ ಕೇಂದ್ರಕ್ಕೆ (ಪಡಿತರ ಅಂಗಡಿ) ವಿಚಕ್ಷಣ ದಳ ಆಯ್ಕೆ.

15. **ಶಿಕ್ಷಣ**

1) ವಯಸ್ಕರ ಶಿಕ್ಷಣ ಮತ್ತು ತಾಂತ್ರಿಕ ತರಬೇತಿಯನ್ನೂ ಒಳಗೊಂಡ ಗ್ರಾಮ ಪಂಚಾಯತ್ ಶೈಕಣಿಕ ಯೋಜನೆಯ ಅಂಗೀಕಾರ
2) ಎಲ್ಲರಿಗೂ ಶಿಕ್ಷಣ ಮತ್ತು ಗುಣಾಧಾರಿತ ಶಿಕ್ಷಣ ಎಲ್ಲರಿಗೂ ಸಿಗಲು ಯೋಜನೆ ತಯಾರಿ ಹಾಗೂ ಶಾಲಾ ಅಭಿವೃದ್ಧಿ ಯೋಜನೆ ತಯಾರಿ ಹಾಗೂ ಅಂಗೀಕಾರ

16. **ಗ್ರಂಥಾಲಯ ಹಾಗೂ ವಾಚಾನಾಲಯ**

1) ಗ್ರಾಮೀಣ ಗ್ರಂಥಾಲಯಕ್ಕೆ ಅಗತ್ಯ ಪುಸ್ತಕ ಹಾಗೂ ನಿಯತಕಾಲಿಕ ಸಂಗ್ರಹಣೆ (ದಾನಿಗಳಿಂದ)
2) ಸಮುದಾಯದಲ್ಲಿ ಓದುವ ಅಭಿರುಚಿ ಬೆಳೆಸುವುದು.

17. **ನೈರ್ಮಲ್ಯ**

1) ಗ್ರಾಮ ಪಂಚಾಯತ್‌ನ ನೈರ್ಮಲ್ಯ ಯೋಜನೆ ಅದರಲ್ಲೂ ಘನ ಮತ್ತು ದ್ರವ ತ್ಯಜ್ಯ ನಿರ್ವಹಣೆಯ ಯೋಜನೆ ತಯಾರಿ ಮತ್ತು ಅಂಗೀಕಾರ,
2) ಸ್ವಯಂ ಸೇವಾ ಸಂಸ್ಥೆಗಳು ಭಾಗವಹಿಸುವಂತೆ ಮಾಡುವುದು.

18. **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ**.

1) 0-6 ವರ್ಷದ ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಬಾಣಂತನ ಪೂರ್ವ ಮತ್ತು ನಂತರದ ಮಹಿಳೆ ಮತ್ತು ಮಕ್ಕಳ ಪೋಷಣೆ, ರಕ್ಷಣೆಗೆ ಯೋಜನೆ ತಯಾರಿ ಹಾಗೂ ಅಂಗೀಕಾರ.
2) ಹದಿಹರೆಯದವರ ರಕ್ಷಣೆಯ ಯೋಜನೆ ತಯಾರಿ ಮತ್ತು ಅಂಗೀಕಾರ.

19. **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ**

1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿ ಮತ್ತು ಅಂಗೀಕಾರ
2) ಗ್ರಾಮ ಪಂಚಾಯತ್‌ನಲ್ಲಿ ಅಸ್ಪ್ರಶ್ಯತೆ ತಡೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ತಾರತಮ್ಯ ತಡೆ, ಮೂಡನಂಬಿಕೆಗಳ ನಿವಾರಣೆಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ತಯಾರಿ ಮತ್ತು ಅಂಗೀಕಾರ

20. **ಸಹಕಾರ**

1) ಸಹಕಾರ ಚಳುವಳಿ, ಸಹಕಾರಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ, ಆ ಮೂಲಕ ಗ್ರಾಮ ಅಭಿವೃದ್ಧಿಗೆ ಯೋಜನೆ ತಯಾರಿ ಮತ್ತು ಅಂಗೀಕಾರ
2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದ ಫಲಾನುಭವಿಗಳಿಗೆ ಸಹಕಾರಿ ಸಂಘದ ಸದಸ್ಯರಾಗಲು ಸಬ್ಸಿಡಿ ಅಂಗೀಕಾರ

21. **ಯೋಜನೆ**

1) ಯೋಜನಾ ಸಮಿತಿಯ ರಚನೆ ಅವರಿಂದ ಕರಡು ಯೋಜನೆಯನ್ನು ಪರಿಗಣಿಸುವುಸು ಮತ್ತು ಅದರ ಅಂಗೀಕಾರ
2) ಸಮಸ್ತ ಯೋಜನೆ ಮತ್ತು ವಾರ್ಷಿಕ ಯೋಜನೆ ಮೌಲ್ಯಮಾಪನ ಮತ್ತು ನಿರ್ವಹಣೆ

22. **ಜ್ಞಾನ ನಿರ್ವಹಣೆ**

1) ಜ್ಞಾನ ನಿರ್ವಹಣೆಗೆ ತಜ್ಞರನ್ನೊಳಗೊಂಡ ಸಮಿತಿ ರಚನೆ
2) ಜ್ಞಾನ ನಿರ್ವಹಣಾ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ

23.**ಕಿರು ಹಣಕಾಸು ಚಟುವಟಿಕೆ**

1) ಕಿರು ಹಣಕಾಸು ಯೋಜನೆಗೆ ಪ್ರೋತ್ಸಾಹ, ಭಾಗವಹಿಸುವಿಕೆ ಹಾಗೂ ಯೋಜನೆ ತಯಾರಿ ಮತ್ತು ಅಂಗೀಕಾರ
2) ಕಿರು ಹಣಕಾಸು ಚಟುವಟಿಕೆಯನ್ನು ಅನೈತಿಕ ವ್ಯವಹಾರ, ಭ್ರಷ್ಟಾಚಾರ, ಅತಿ ಬಡ್ಡಿದರ, ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಮೌಲ್ಯ ಮಾಪನ ಮತ್ತು ಉಪಕ್ರಮ ಬಗ್ಗೆ ಸಲಹೆ.

24.**ಗ್ರಾಮೀಣ ವಾತಾವರಣ ಮತ್ತು ಪರಿಸರ ವಿಜ್ಞಾನ**

1) ವಾತಾವರಣ ಮತ್ತು ಪರಿಸರ ನೀತಿ ನಿರ್ಧರಿಸುವುದು
2) ಪರಿಸರ ರಕ್ಷಣೆಯ ಯೋಜನೆ ತಯಾರಿ ಮತ್ತು ಅಂಗೀಕಾರ
3) ಪರಿಸರ ವಾತಾವರಣ ನಿರ್ವಹಣೆ, ರಕ್ಷಣೆ, ಪೋಷಣೆಗೆ ಜಾಗ್ರತಿ ಅಭಿಯಾನ

25. **ಸಂಪನ್ಮೂಲ ಕ್ರೋಢಿಕರಣ**

1) ಸಂಪನ್ಮೂಲ ಗುರುತಿಸುವುದು
2) ನಿಯತಕಾಲಿಕವಾಗಿ ತೆರಿಗೆ ವಿಧಿಸುವುದು, ತೆರಿಗೆ ಸಂಗ್ರಹಣೆ, ತೆರಿಗೆ ವಿಮರ್ಶೆ, ತೆರಿಗೆ ದರ ನಿರ್ಧಾರ, ನಿರ್ವಹಣೆಗೆ ನೀತಿ ನಿಯಮಗಳ ರಚನೆಮತ್ತು ಅಂಗೀಕಾರ.
3) ಅಭಿವೃದ್ಧಿ ಯೋಜನೆಯಲ್ಲಿ ಸಮುದಾಯ ಭಾಗವಹಿಸುವಿಕೆಗೆ ಪ್ರೊತ್ಸಾಹ ಹಾಗೂ ಯೋಜನೆ ತಯಾರಿ
4) ನಗದು ರೂಪ, ವಸ್ತು ರೂಪದಲ್ಲಿ ಮತ್ತು ಮಾನವ ಸಂಪನ್ಮೂಲ ರೂಪದಲ್ಲಿ ಸಂಪನ್ಮೂಲ ಕ್ರೋಢೀಕರಣ.

## **ಅನುಸೂಚಿ 1: ಗ್ರಾಮ ಪಂಚಾಯತ್**

**ಸಾಮಾನ್ಯ**

- ಒಂದು ಗ್ರಾಮ ಪಂಚಾಯತ್ ಪ್ರದೇಶದಲ್ಲಿ **ಅನುಸೂಚಿ** 2 ರಲ್ಲಿ ಹೇಳಿರುವ ಎಲ್ಲಾ ಕಾರ್ಯಕ್ರಮ ವಿಷಯಗಳನ್ನು ಯೋಜಿಸುವುದು ಅನುಷ್ಟಾನಿಸುವುದರ ಮೂಲಕ ಗ್ರಾಮ ಪಂಚಾಯತ್‌ನ ಕರ್ತವ್ಯ. ಮತ್ತು ಈ ಕರ್ತವ್ಯ ನಿರ್ವಹಿಸುವ ಬಗ್ಗೆ ಜವಾಬ್ದಾರಿ ಪಟ್ಟಿಯಲ್ಲಿ ವಿಷದವಾಗಿ ಹೇಳಲಾಗಿದೆ.
- ಈ ಕಾಯ್ದೆ ಮತ್ತು ಮಾರ್ಗದರ್ಶಿಯ ಇತರ ನಿಬಂಧನೆಗಳು, ಮತ್ತು ಸರ್ಕಾರದ ಹಣಕಾಸು, ತಾಂತ್ರಿಕ ಹಾಗೂ ಇತರ ಸಹಕಾರಗಳಿಗೆ ಸಂಬಂಧಿಸಿದಂತೆ **ಅನುಸೂಚಿ** 2 ರಲ್ಲಿ ಹೇಳಿದ ವಿಷಯಗಳ ಕುರಿತಾದ ಆಡಳಿತ ನಡೆಸಲು ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಯೋಜನೆಗಳನ್ನು ತಯಾರಿಸಲು ಮತ್ತು ಅನುಷ್ಟಾನಗೊಳಿಸಲು ಗ್ರಾಮ ಪಂಚಾಯತ್ ವಿಶೇಷಾಧಿಕಾರ ಹೊಂದಿರುತ್ತದೆ,
- **ಅನುಸೂಚಿ** 2 ರಲ್ಲಿ ಹೇಳಿರುವ ವಿಷಯಗಳನ್ನು ಅನುಷ್ಟಾನಿಸುವಲ್ಲಿ ಸಂಭಂದಪಟ್ಟ ಜವಾಬ್ದಾರ ವ್ಯಕ್ತಿಗಳು ಕಾರ್ಯಗಳು ಮತ್ತು ಅದಕ್ಕಾಗಿ ಮೀಸಲಿಟ್ಟ ಹಣಕಾಸು ಈ ಮೂರು ವಿಷಯಗಳು ಗ್ರಾಮ ಪಂಚಾಯತ್ ಅಧೀನಕ್ಕೆ ಬರತಕ್ಕದ್ದು.

1. **ಕೃಷಿ ತೋಟಗಾರಿಕೆ ಮತ್ತು ರೇಶ್ಮೆ ಸಾಕಾಣಿಕೆ**

- ಕ್ರಷಿ ತೋಟಗಾರಿಕೆ ಮತ್ತು ರೇಶ್ಮೆ ಸಾಕಾಣಿಕೆ ಬಗ್ಗೆ ಪಂಚಾಯತ್ ಮಟ್ಟದಲ್ಲಿ ಸಮಗ್ರ ಯೋಜನೆ ತಯಾರಿಸಿ, ಕ್ರಷಿ ಉತ್ಪನ್ನ ಮತ್ತು ತರಕಾರಿ ಧಾನ್ಯ ಉತ್ಪನ್ನ ಹಾಗೂ ರೇಶ್ಮೇ ಸಾಕಾಣಿಕೆ ಯೋಜನೆಯನ್ನು ಅನುಷ್ಟಾನಗೊಳಿಸುವುದು.
- ಸಮಗ್ರ ಕೃಷಿ ಭೂಮಿ, ಕರಾಬು ಭೂಮಿ ಸಹಿತ ಭೂಮಿಯನ್ನು ಪರಿಪೂರ್ಣ ಉಪಯೋಗಿಡಸಲಉ ಯೋಜನೆ ಮತ್ತು ಅದರ ಅನುಷ್ಟಾನ.
- ಕೃಷಿಗೆ ಸಂಬಂಧಪಟ್ಟು ಕೃಷಿ ನರ್ಸರಿ ಸ್ಥಾಪಿಸಿ ನಿರ್ವಹಣೆ ಮಾಡುವುದು.
- ಕೃಷಿ ಯಾಂತ್ರೀಕರಣಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯ ಮತ್ತು ಪ್ರೋತ್ಸಾಹ.
- ರೈತರು ಸಹಕಾರಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ಮತ್ತು ಗುಂಪಾಗಿ ಕೃಷಿ ಚಟುವಟಿಕೆ ಮಾಡಲು ಆಧ್ಯತೆ.
- ನೀರು ಮಣ್ಣು ಮತ್ತು ಬೀಜಗಳ ರಕ್ಷಣೆ ಬಗ್ಗೆ ಯೋಜನೆ ಮತ್ತು ಅನುಷ್ಟಾನ
- ಜಲಾನಯನ ಯೋಜನೆ ಅನುಷ್ಟಾನ ಮತ್ತು ನಿರ್ವಹಣೆ
- ಮಾರುಕಟ್ಟೆ ಧಾರಣೆಯನ್ನು ಪ್ರಕಟಿಸುವುದು.
- ಕೃಷಿ ವಿಮೆ ಯೋಜನೆ ತಯಾರಿ ಮತ್ತು ಅನುಷ್ಟಾನ

2. **ಸಣ್ಣ ನೀರಾವರಿ ಯೋಜನೆ**

- ಗ್ರಾಮ ಪಂಚಾಯತ್ ಮಟ್ಟದಲ್ಲಿ ಎಲ್ಲಾ ಸಣ್ಣ ನೀರಾವರಿ ಯೋಜನೆ ತಯಾರಿ, ಯೋಜನೆ ಅನುಷ್ಟಾನ, ರಚನೆ, ಪುನರರಚನೆ ಮತ್ತು ನಿರ್ವಹಣೆ
- ಪಂಚಾಯತ್‌ನಲ್ಲಿರುವ ಸಣ್ಣ ನೀರಾವರಿ ಮತ್ತು ಕಿರು ನೀರಾವರಿ ಯೋಜನೆಗಳ ಮೂಲಕ ನೀರಿನ ಸಮಾನ ನ್ಯಾಯಯುತ ಹಂಚಿಕೆ ಮತ್ತು ಅದರ ನಿರ್ವಹಣೆ ಮತ್ತು ಅನುಷ್ಟಾನ

- ಮಳೆ ನೀರು ಕೊಯ್ಲು, ಅಂತರ್ಜಲ ಪುನರುಜ್ಜೀವನದ ಬಗ್ಗೆ ಪಂಚಾಯತ್ ಮಟ್ಟದಲ್ಲಿ ಯೋಜಿಸಿ ಅನುಷ್ಠಾನಗೊಳಿಸುವುದು.
- ಪಂಚಾಯತ್ ಮಟ್ಟದಲ್ಲಿರುವ ಎಲ್ಲಾ ನೀರಾವರಿ ಮೂಲಗಳ ಗುರುತುಹಾಕುವಿಕೆ, ದಾಖಲು ಮಾಡುವಿಕೆ ಮತ್ತು ದಾಖಲಾತಿಯ ನಿರ್ವಹಣೆ

3. **ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ**

- ಎಲ್ಲಾ ರೀತಿಯ ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ, ಕೋಳಿ, ಹಂದಿ, ಕುರಿ ಸಾಕಣೆ ಇತ್ಯಾದಿ ವಿಷಯಗಳ ಬಗ್ಗೆ ಯೋಜನೆ ಮತ್ತು ಅನುಷ್ಠಾನ
- ಪಶು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ
- ಪಶು ವೈದ್ಯಕೀಯ ಸೇವಾ ಉಪಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವುದು
- ಅಂಟುರೋಗ ಮತ್ತು ಜಾಡ್ಯಗಳ ನಿಯಂತ್ರಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
- ನೀರಾವರಿ ಪ್ರದೇಶಗಳಲ್ಲಿ ಮೀನು ಸಾಕಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
- ಮೀನುಗಾರಿಕೆಗೆ ಸಂಬಂಧಪಟ್ಟ ಯೋಜನೆಗಳ ಅನುಷ್ಠಾನ
- ಗ್ರಾಮೀಣ ಮೀನು ಮಾರುಕಟ್ಟೆಯ ಸ್ಥಾಪನೆ ನಿರ್ವಹಣೆ
- ಮೇವು ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನ

4. **ಸಾಮಾಜಿಕ ಅರಣ್ಯ**

- ಬಂಜರು, ಕರಾಬು ಭೂಮಿಯಲ್ಲಿ ಅರಣ್ಯೀಕರಣ ಕಾರ್ಯಕ್ರಮ
- ಸಾಮಾಜಿಕ ಅರಣ್ಯ, ಕೃಷಿ ಅರಣ್ಯಗಳ ಸ್ಥಾಪನೆ, ಅಭಿವೃದ್ಧಿ ಮತ್ತು ನಿರ್ವಹಣೆ ಮತ್ತು ಅರಣ್ಯ ಉತ್ಪನ್ನಗಳ ವಿಲೇವಾರಿ
- ಹಣ್ಣಿನ ಮರ, ಪೀಠೋಪಕರಣಗಳ ಮರ, ಇಂಧನಕ್ಕೆ ಬಳಸುವ ಮರ, ಮೇವಿಗಾಗಿ ಮರಗಳನ್ನು ಬೆಳೆಸುವುದು
- ಕೃಷಿ ಅರಣ್ಯಗಳ ಸ್ಥಾಪನೆ
- ನರ್ಸರಿಗಳ ಸ್ಥಾಪನೆ ಮತ್ತು ನಿರ್ವಹಣೆ
- ಕಿರು ಅರಣ್ಯ ಉತ್ಪನ್ನಗಳ ನಿರ್ವಹಣೆ
- ಸಾಮಾಜಿಕ ಅರಣ್ಯ ಮತ್ತು ಕೃಷಿ ಅರಣ್ಯ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನ
- ತಾಂತ್ರಿಕ ಮತ್ತು ತಜ್ಞ ಸಂಬಂಧಿತ ವಿಷಯಗಳನ್ನು ಗ್ರಾಮ ಪಂಚಾಯತ್‌ಗೆ ನೀಡುವುದು.

5. **ಪ್ರವಾಸೋದ್ಯಮ**

- ಗ್ರಾಮ ಪಂಚಾಯತ್ ಮಟ್ಟದಲ್ಲಿರುವ ಪ್ರವಾಸಿ ತಾಣಗಳ ಗುರುತಿಸುವಿಕೆ ಮತ್ತು ಅಭಿವೃದ್ಧಿ
- ಗ್ರಾಮ ಪ್ರವಾಸೋದ್ಯಮ ಚಟುವಟಿಕೆಗಳ ನೀತಿ ನಿಯಮಗಳನ್ನು ಗ್ರಾಮ ಸಭೆಯೊಡನೆ ಚರ್ಚಿಸಿ ಅನುಷ್ಠಾನಕ್ಕೆ ತರುವುದು
- ಪ್ರವಾಸಿ ತಾಣಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡುವುದು
- ಪ್ರವಾಸಿಗಳನ್ನು ಆಕರ್ಷಿಸಲು ಸೂಕ್ತ ಕಾರ್ಯಕ್ರಮಗಳ ಅನುಷ್ಠಾನ

- ಪ್ರವಾಸಿ ಮಾರ್ಗದರ್ಶಿ, ಹಸಿರು ಪೋಲೀಸ್ ಮತ್ತು ಜೀವರಕ್ಷಕ ವ್ಯಕ್ತಿಗಳನ್ನು ಪ್ರವಾಸಿ ತಾಣಗಳಲ್ಲಿ ನೇಮಕ ಮಾಡುವುದು
- ಪ್ರವಾಸಿ ತಾಣಗಳಲ್ಲಿ ಪ್ರವೇಶ ಶುಲ್ಕ ಮತ್ತು ನಿಲುಗಡೆಯ ಶುಲ್ಕಗಳ ಸಂಗ್ರಹಣೆ

6. **ಸಣ್ಣ ಕೈಗಾರಿಕೆಗಳು ಮತ್ತು ಗ್ರಾಮೀಣ ಉದ್ಯಮಗಳು– ಖಾದಿ, ಕರಕುಶಲ ಕೈಗಾರಿಕೆ, ಗ್ರಾಮೋದ್ಯಮಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು**
    - ಗುಡಿ ಕೈಗಾರಿಕೆ ಮತ್ತು ಗ್ರಾಮೀಣ ಕೈಗಾರಿಕೆ, ಖಾದಿ, ಕರಕುಶಲ ಕೈಗಾರಿಕೆ , ಆಹಾರ ಸಂಸ್ಕರಣಾ ಕೈಗಾರಿಕೆಗಳಿಗೆ ಉತ್ತೇಜನ ಮತ್ತು ಇತರೇ ಕೃಷಿಯೇತರ ಚಟುವಟಿಕೆ.
    - ಮಾರುಕಟ್ಟೆ ಸೌಲಭ್ಯಗಳನ್ನು ಸಂಘಟಿಸುವುದು
    - ಗುಡಿ ಕೈಗಾರಿಕೆ, ಖಾದಿ, ಕರಕುಶಲ, ಗ್ರಾಮೀಣ ಕೈಗಾರಿಕೆ ಆಹಾರ ಸಂಸ್ಕರಣ ಕೈಗಾರಿಕೆಗಳು ಇವುಗಳಿಗೆ ಸಂಬಂಧಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಮಂಡಳಿಗಳ ಕಾರ್ಯಕ್ರಮ ಅನುಷ್ಠಾನ
    - ಕಚ್ಚಾ ವಸ್ತು ಮತ್ತು ಮೌಲ್ಯಾಧಾರಿತ ಉತ್ಪನ್ನಗಳ ಬಗ್ಗೆ ಮಾಹಿತಿ ಸಂಗ್ರಹಣೆ, ಸಂಸ್ಕರಣೆ ಮತ್ತು ಹಂಚಿಕೆ
    - ಮಾರುಕಟ್ಟೆ ಸಮೀಕ್ಷೆಯ ನಿರ್ವಹಣೆ ಮಾಡಿ ಮಾಹಿತಿಯನ್ನು ಜನರಿಗೆ ನೀಡುವುದು
    - ಉತ್ಪನ್ನಗಳ ಮಾರಾಟ ಚಟುವಟಿಕೆ ಆಹಾರ ಸಂಸ್ಕರಣಾ ಚಟುವಟಿಕೆಗಳನ್ನು ನಿಯಮಬದ್ಧಗೊಳಿಸುವುದು
7. **ಗ್ರಾಮೀಣ ವಸತಿ**
    - ವಲಸೆ ಕಾಮಿಕರ, ಮನೆ ಇಲ್ಲದವರ, ನಿವೇಶನ ರಹಿತರ ಪಟ್ಟಿಯನ್ನು ಮಾಡುವುದು
    - ಮೀನುಗಾರಿಕಾ ಮತ್ಸ್ಯಾಶ್ರಯ ಮನೆಗಳು ಸೇರಿ ಎಲ್ಲಾ ಗ್ರಾಮೀಣ ವಸತಿ ಯೋಜನೆಗಳ ಅನುಷ್ಟಾನ
    - ಮನೆ ಉನ್ನತೀಕರಣ ಕಾರ್ಯಕ್ರಮದ ಅನುಷ್ಟಾನ
    - ಶ್ರಾಯವಾರು ಬರುವ ವಲಸೆ ಕಾಮಿಕರಿಗೆ ಮೂಲಭೂತ ಸೌಕರ್ಯಗಳಿಂದ ಕೂಡಿದ ವಸತಿ  ಸೌಕರ್ಯ ಒದಗಿಸುವುದು
    - ಗ್ರಾಮೀಣ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಉತ್ತೇಜನ
    - ಸರ್ಕಾರಿ ಪಂಚಾಯತ್ ಭೂಮಿಗಳನ್ನು  ಗುರುತಿಸಿ ಹಾಗೂ ಖಾಸಗೀ ಭೂಮಿಯನ್ನು ಪಡೆದು ವಸತಿ ಬಡಾವಣೆಗಳನ್ನ  ಅಭಿವೃದ್ಧಿ ಪಡಿಸಿ ಮನೆ ಇಲ್ಲದವರಿಗೆ ನೀಡುವುದು
8. **ಕುಡಿಯುವ ನೀರು ಪೂರೈಕೆ**
    - ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಮಗ್ರವಾಗಿ ಕುಡಿಯುವ ನೀರಿನ ಅಗತ್ಯತೆಗಳ ಬಗ್ಗೆ ಮಾಹಿತಿ ಸಂಗ್ರಹ ಮತ್ತು ಅದರ ಆಧಾರದ ಮೇಲೆ ಯೋಜನೆ ತಯಾರಿ
    - ಗ್ರಾಮ ಪಂಚಾಯತ್ ಮಟ್ಟದಲ್ಲಿ ಕುಡಿಯುವ ನೀರಿನ ವಿವಿಧ ಯೋಜನೆಗಳ ತಯಾರಿಸಿ ಅನುಷ್ಟಾನ ಮಾಡುವುದು
    - ನೀರಿನ ಅನೈರ್ಮಲ್ಯೀಕರಣ ತಡೆಯುವುದು, ನಿಯಂತ್ರಣ ಮತ್ತು ರಕ್ಷಣೆ
    - ಸಾಂಪ್ರದಾಯಿಕ ಕುಡಿಯುವ ನೀರಿನ ಮೂಲಗಳ ರಕ್ಷಣೆ ಮತ್ತು ನಿರ್ವಹಣೆ
    - ಕುಡಿಯುವ ನೀರಿನ ಮೂಲಗಳಿಂದ ನೀರು ಸಂಗ್ರಹಿಸಿ ಪರೀಕ್ಷಿಸುವುದು
    - ನಿಯತಕಾಲಿಕವಾಗಿ ಕುಡಿಯುವ ನೀರನ್ನು ಶುದ್ಧೀಕರಣಗೊಳಿಸುವುದು.

- ಜನರ ಮನೆಗಳಿಗೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಮತ್ತು ಇತರೇ ನೀರು ಬಳಕೆದಾರರಿಗೆ ನಲ್ಲಿ ನೀರಿನ ವಿತರಣೆಯನ್ನು ಅನುಷ್ಠಾನಗೊಳಿಸುವುದು ಮತ್ತು ಬಳಕೆದಾರರ ಶುಲ್ಕವನ್ನು ನಿಗದಿ ಪಡಿಸಿದಂತೆ ವಸೂಲಿ ಮಾಡುವುದು.

9. **ಸಾರ್ವಜನಿಕ ಕಾಮಗಾರಿಗಳು, ನಗರ ಮತ್ತು ಗ್ರಾಮಾಂತರ ಯೋಜನೆಗಳು (ರಸ್ತೆ, ಸೇತುವೆ, ಹಾಯ್ಗಡ, ಜಲಮಾರ್ಗ, ಇತರ ಸಂಪರ್ಕಿಸುವ ಮಾರ್ಗಗಳು)**

- ಈ ಕೆಳಗಿನವುಗಳ ಯೋಜನೆ ಸ್ಥಾಪನೆ ಮತ್ತು ನಿರ್ವಹಣೆ
  - ಕಾಲುದಾರಿ ಪಾದಾಚಾರಿ ಮಾರ್ಗ ಮತ್ತು ಓಣಿ
  - ಗ್ರಾಮೀಣ ರಸ್ಥೆ
  - ಸೇತುವೆ, ಸಂಕ, ಮೋರಿಗಳು
  - ಕಟ್ಟಡಗಳು
  - ಚರಂಡಿಗಳು ಇತ್ಯಾದಿ
- ಪ್ರಯಾಣಿಕರ ತಂಗುದಾಣ, ವಾಹನ ನಿಲ್ದಾಣ ಸ್ಥಾಪನೆ ಮತ್ತು ನಿರ್ವಹಣೆ
  - ಆಟದ ಮೈದಾನಗಳ ಸ್ಥಾಪನೆ ಮತ್ತು ನಿರ್ವಹಣೆ
- ಬೇರೆ ಬೇರೆ ರೀತಿಯ ಸ್ಮಶಾನಗಳ ಸ್ಥಾಪನೆ ಮತ್ತು ನಿರ್ವಹಣೆ ಮತ್ತು ಅದರ ಉಪಯೋಗದ ಬಗ್ಗೆ ನೀತಿ ನಿಯಮಗಳನ್ನು ರಚಿಸಿ ಅನುಷ್ಟಾನಗೊಳಿಸುವುದು.
  - ಜಲಮಾರ್ಗಗಲು, ಬೋಟ್‌ಗಳು, ಕಾಲುವೆಗಳು ಮತ್ತು ಪೇರ್ರಿಗಳ ನಿರ್ವಹಣೆ
- ಮಳೆ ನೀರು ಹರಿಯುವ ಚರಂಡಿಗಳ ನಿರ್ವಹಣೆ
- ಸಮುದಾಯಗಳ ಅಗತ್ಯತೆ ಮೇಲೆ ವಿವಿಧ ಮೂಲಭೂತ ಅಗತ್ಯತೆಗಳು - ಸ್ನಾನ ಘಟ್ಟಗಳು, ಸಾರ್ವಜನಿಕ ಮಾರುಕಟ್ಟೆಗಳು ಇತ್ಯಾದಿಗಳ ಸ್ಥಾಪನೆ ಮತ್ತು ನಿರ್ವಹಣೆ
- ವಸತಿ ಸಮೂಹಗಳ ಅಭಿವೃದ್ಧಿ
- ವಸತಿ ಬಡಾವಣೆಗಳ ಸ್ಥಾಪನೆ ಮತ್ತು ಹಂಚುವಿಕೆ
- ಸಾರ್ವಜನಿಕ ಸೇವಾ ವ್ಯವಸ್ಥೆಯ ಕಟ್ಟಡಗಳು - ಉದಾಹರಣೆಗೆ ಶಾಲಾ ಕಟ್ಟಡ ಆಸ್ಪತ್ರೆ ಇತರ ಸಾರ್ವಜನಿಕ ಸಂಸ್ಥೆಗಳ ಕಟ್ಟಡಗಳ ಯೋಜನೆ, ಅನುಷ್ಟಾನ ಮತ್ತು ನಿರ್ವಹಣೆ

10. **ಗ್ರಾಮೀಣ ವಿದ್ಯುದೀಕರಣ,/ವಿದ್ಯುತ್ ಮತ್ತು ಇಂಧನ**

- ಸಾರ್ವಜನಿಕ ರಸ್ತೆ ಮತ್ತು ಸ್ಥಳಗಳಲ್ಲಿ ದಾರಿದೀಪಗಳ ಅಳವಡಿಸುವಿಕೆ ಮತ್ತು ನಿರ್ವಹಣೆ
- ಸಣ್ಣ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಶಕ್ತಿ ಮೂಲಗಳು ಉದಾಹರಣೆಗೆ ಸೋಲಾರ್, ಜೈವಿಕ ಅನಿಲ, ಗಾಳಿಯಂತ್ರ, ಜಲ ವಿದ್ಯುತ್ ಘಟಕಗಳ ಯೋಜನೆ, ಸ್ಥಾಪನೆ, ನಿರ್ವಹಣೆ ಮತ್ತು ಅಭಿವೃದ್ಧಿ ಪಡಿಸುವುದು.
- ಉಳಿಕೆಯ ವಿದ್ಯುತ್ ಅಥವಾ ಶಕ್ತಿಯ ಇಂಧನಗಳ ಇತರರಿಗೆ ಮಾರಟ
- ಸ್ವಯಂ ಆಗಿ ಅನುಷ್ಟಾಗೊಳಿಸುವ ಗ್ರಾಮ ಪಂಚಾಯತ್‌ಗಳಿಗೆ ಸಂಪೂರ್ಣ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು ಹಸ್ತಾಂತರಿಸುವುದು.

11. **ಬಡತನ ನಿವಾರಣೆ**

- ಬಡತನ ನಿವಾರಣಾ ಕಾರ್ಯಕ್ರಮಕ್ಕೆ ಗ್ರಾಮ ಸಭೆಯ ಮೂಲಕ ಬಡವರನ್ನು ಗುರುತು ಹಾಕಿ, ಅವರಿಗೆ ಸೌಲಭ್ಯಗಳನ್ನು ನೀಡುವುದು
- ಬಡತನ ನಿವಾರಣಾ ಕಾರ್ಯಕ್ರಮದ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಗುರುತು ಹಾಕುವುದು
- ವಿವಿಧ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು ಗ್ರಾಮ ಸಭೆಗಳನ್ನು ಸಂಘಟಿಸುವುದು.
- ಬಡತನ ನಿವಾರಣಾ ಕಾರ್ಯಕ್ರಮ ಯೋಜನೆ, ಅನುಷ್ಟಾನ, ಹಂಚಿಕೆ, ಉಸ್ತುವಾರಿ ಮತ್ತು ನಿರ್ವಹಣೆ
- ಸ್ವಯಂ ಉದ್ಯೋಗದ ಕಾರ್ಯಕ್ರಮಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
- ನೆರೆಹೊರೆಯ ಗುಂಪು, ಸ್ವಸಹಾಯ ಗುಂಪುಗಳನ್ನು ಸಂಘಟಿಸಿ ಅವರನ್ನು ಸಶಕ್ತಗೊಳಿಸಲು ಕಾರ್ಯಕ್ರಮಗಳನ್ನು ಸಂಘಟಿಸುವುದು.
- ಬಡತನ ನಿವಾರಣೆಗೆ ಅಗತ್ಯತೆಗಳನ್ನು ನಿರ್ಧರಿಸುವುದು
- ಸ್ವಯಂ ಉದ್ಯೋಗ ಮತ್ತು ಕೂಲಿ ಕೆಲಸದ ಕಾರ್ಯಕ್ರಮಗಳನ್ನು ಯೋಜಿಸಿ ಅನುಷ್ಟಾನಗೊಳಿಸುವುದು
- ವಿವಿಧ ಅಡಿಯಲ್ಲಿ ಕನಿಷ್ಟ ಸೌಲಭ್ಯಗಳನ್ನು ಒದಗಿಸುವುದು.

**12. ಸಾರ್ವಜನಿಕ ವಿತರಣಾ ವ್ಯವಸ್ಥೆ**

- ನಿತ್ಯದ ಅಗತ್ಯತೆಗಳ ಮತ್ತು ಆಹಾರ ಧಾನ್ಯಗಳ ಹಂಚುವಿಕೆ
- ನಿತ್ಯದ ಅಗತ್ಯತೆಗಳ ಮತ್ತು ಆಹಾರ ಧಾನ್ಯಗಳ ವಿತರಿಸುವ ಏಜೆನ್ಸಿಗಳ ಗುರುತಿಸುವಿಕೆ
- ಸಾರ್ವಜನಿಕ ವಿತರಣಾ ವ್ಯವಸ್ಥೆಯ ಉಸ್ತುವಾರಿ ಮತ್ತು ನಿರ್ವಹಣೆ
- ಸಾರ್ವಜನಿಕ ಗೋದಾಮು ಮತ್ತು ಸಂಗ್ರಹಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ.

**13. ವಿಪತ್ತು ನಿರ್ವಹಣೆ**

- ವಿಪತ್ತು ಸಂಭವಿಸಬಹುದಾದ ಪ್ರದೇಶಗಳ ಸಮೀಕ್ಷೆ
- ವಿಪತ್ತು ನಿರ್ವಹಣೆ ಸೌಲಭ್ಯಗಳ ಸೃಷ್ಟಿ ಮತ್ತು ನಿರ್ವಹಣೆ
- ವಿಪತ್ತು ನಿರ್ವಹಣೆಗೆ ಸ್ಥಳೀಯ ಮತ್ತು ಹೊರಗಿನ ತಜ್ಞರ ಗುರುತು ಹಾಕುವಿಕೆ
- ವಿಪತ್ತಿಗೊಳಗಾದವರಿಗೆ ನೆರವು ನೀಡುವಿಕೆ

**14. ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ, ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ),**

- ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಶಿಕ್ಷಣದ ಬಗ್ಗೆ ಯೋಜನೆ ತಯಾರಿ, ಅನುಷ್ಠಾನ ಮತ್ತು ನಿರ್ವಹಣೆ.
- ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಪ್ರಸ್ಥಾವನೆಗಳ ತಯಾರಿ ಮತ್ತು ಮಾನ್ಯತೆಗೆ ಸೂಕ್ತ ಪ್ರಾಧಿಕಾರಕ್ಕೆ ರವಾನೆ
- ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಉಸ್ತುವಾರಿ
- ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ
- ಮಕ್ಕಳ ಅಂಕಿ-ಅಂಶಗಳ ಸಂಗ್ರಹಣೆ ಮತ್ತು ನಿರ್ವಹಣೆ

- ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣಗಳ ಮೂಲಕ ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನ
- ಈ ಶಿಕ್ಷಣ ವ್ಯವಸ್ಥೆಗಳ ಗುಣಮಟ್ಟ ನಿಯಂತ್ರಣ, ಆಡಳಿತ ಉಸ್ತುವಾರಿ ಮತ್ತು ನಿರ್ವಹಣೆ
- ಆಶ್ರಮ ಶಾಲೆಗಳು, ಪ್ರಾಥಮಿಕ ಹಂತದ ವರೆಗಿನ ವಸತಿ ಶಾಲೆಗಳು ಅನಾತಾಲಯಗಳ ಬಗ್ಗೆ ಯೋಜನೆ ಸ್ಥಾಪನೆ ಮತ್ತು ನಿರ್ವಹಣೆ
- ಗ್ರಾಮ ಪಂಚಾಯತ್ ಮಟ್ಟದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಸಮೀಕ್ಷೆ ಮತ್ತು ಮೌಲ್ಯ ಮಾಪನ
- ಹಿಂದುಳಿದ ವರ್ಗಗಳು ಮತ್ತು ಗುಂಪುಗಳು, ಹೆಣ್ಣುಮಕ್ಕಳು, ವಿಶೇಷ ಸಾಮರ್ಥ್ಯದ ಮಕ್ಕಳು ಅಲ್ಪ ಸಂಖ್ಯಾತ ಮಕ್ಕಳಿಗೆ, ಆಶ್ರಮ ಶಾಲೆ ವಸತಿ ಶಾಲೆಗಳಿಗೆ ಯೋಜನೆ, ಅನುಷ್ಠಾನ ಮತ್ತು ನಿರ್ವಹಣೆ
- ಗ್ರಾಮೀಣ ಉದ್ಯೋಗ ಮತ್ತು ಕೈಗಾರಿಕೆಯ ತರಬೇತಿ ಮತ್ತು ಉತ್ತೇಜನ
- ವಯಸ್ಕ ಶಿಕ್ಷಣ ಮತ್ತು ಅನಕ್ಷರಸ್ಥರಿಗೆ ಸಾಕ್ಷರತಾ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನ
- ಗ್ರಾಮ ಪಂಚಾಯತ್ ಉಸ್ತುವಾರಿಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಧ್ಯಕಾಲಿಕ ಶಿಕ್ಷಕರು (stop gap teachers), ಅರೆಕಾಲಿಕ ಮತ್ತು ಗೌರವ ಶಿಕ್ಷಕರ ನೇಮಕ

**15. ಗ್ರಂಥಾಲಯ**

- ಗ್ರಾಮ ಪಂಚಾಯತ್ ಮಟ್ಟದಲ್ಲಿ ಗ್ರಂಥಾಲಯ ಮತ್ತು ವಾಚನಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ
- ಗ್ರಂಥಪಾಲಕರು ಮತ್ತು ಇತರ ಸಿಬ್ಬಂದಿಗಳ ನೇಮಕ

**16. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**

- ಸ್ಥಳೀಯ ಕಲೆ ಮತ್ತು ಸಂಸ್ಕೃತಿಯ ವಿವಿಧ ರೂಪಗಳನ್ನು ಗುರುತಿಸುವುದು
- ಸಾಂಸ್ಕೃತಿಕ ಪರಂಪರೆಗಳನ್ನು ರಕ್ಷಿಸುವುದು ಮತ್ತು ಪುನರುಜ್ಜೀವನಗೊಳಿಸುವುದು.
- ಯುವಕ ಯುವತಿ ಗುಂಪುಗಳ ಸ್ಥಾಪನೆಗೆ ಉತ್ತೇಜನ
- ದುರ್ಬಲ, ಬುಡಕಟ್ಟು ಜನಾಂಗ ಮತ್ತು ಹಿಂದುಳಿದ ವರ್ಗಗಳ ಕಲಾವಿದರ ರಕ್ಷಣೆ
- ಸೌಹಾರ್ಧತೆಯನ್ನು ಕಾಯ್ದುಕೊಳ್ಳುವ ಮತ್ತು ಬೆಳೆಸುವ ಕಾರ್ಯಕ್ರಮ
- ಸಮುದಾಯ ಭವನ, ಸಾಂಸ್ಕೃತಿಕ ಮಂಟಪ, ಬಯಲು ರಂಗ ಮಂದಿರ ಮುಂತಾದವುಗಳ ರಚನೆ ಮತ್ತು ನಿರ್ವಹಣೆ
- ಗ್ರಾಮ ಪಂಚಾಯತ್ ಮಟ್ಟದಲ್ಲಿ ಯುವಜನೋತ್ಸವಗಳ ಸಂಘಟನೆ
- ಜೀವನ ಕೌಶಲ್ಯ, ನಾಯಕತ್ವ ತರಭೇತಿ, ಸಾಂಸ್ಕೃತಿಕ ಮನೊರಂಜನಾ ಚಟುವಟಿಕೆಗಳನ್ನು ಯುವ ಸಮುದಾಯಕ್ಕಾಗಿ ನಡೆಸುವುದು.

**17. ಜಾನುವಾರು ಮೇಳಗಳು ಸೇರಿದಂತೆ ಮಾರುಕಟ್ಟೆ ಮತ್ತು ಜಾತ್ರೆ**

- ಸಾರ್ವಜನಿಕ ಮಾರುಕಟ್ಟೆಯ ಸೌಲಭ್ಯಗಳನ್ನು ಗ್ರಾಮ ಮಟ್ಟದಲ್ಲಿ ಸ್ಥಾಪಿಸಿ ನಿರ್ವಹಿಸುವುದು
- ಜಾನುವಾರು ಜಾತ್ರೆ, ಸೇರಿ ಇತರ ಜಾತ್ರೆ ಪರೀಶೆ, ಉತ್ಸವ, ಸಂತೆ, ಸಾರ್ವಜನಿಕ ಸಭೆ ಸಮಾರಂಭಗಳಿಗೆ ನೀತಿ ನಿಯಮಗಳನ್ನು ರೂಪಿಸುವುದು
- ಗ್ರಾಮೀಣ ಕೃಷಿ ಉತ್ಪನ್ನ ಮತ್ತು ಇತರ ಗುಡಿ ಕೈಗಾರಿಕೆ, ಕರಕುಶ ಕೈಗಾರಿಕಾ ಉತ್ಪನ್ನಗಳಿಗೆ ಉತ್ತೇಜನ
- ಉತ್ಪಾದನಾ ವಸ್ತುಗಳಿಗೆ ಸೂಕ್ತ ಗೋದಾಮು ವ್ಯವಸ್ಥೆ

**18. ಸಾರ್ವಜನಿಕ ಆರೋಗ್ಯ (ಆರೋಗ್ಯ, ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು), ಕುಟುಂಬ ಕಲ್ಯಾಣ**

- ಆರೋಗ್ಯ ಸೇವಾ ಕೇಂದ್ರಗಳು, ಔಷಧಾಲಯಗಳಿಗೆ ಪ್ರಸ್ಥಾವನೆಗಳನ್ನು ಸೂಕ್ತ ಪ್ರಾಧಿಕಾರ ಅಥವಾ ಸರ್ಕಾರಕ್ಕೆ ಅನುಮತಿಗಾಗಿ ಕಳಿಸುವುದು.
- ಆರೋಗ್ಯ ಉಪಕೇಂದ್ರ, ಆರೋಗ್ಯ ಸೇವಾ ಕೇಂದ್ರಗಳು ಔಷಧಾಲಯಗಳ ಸ್ಥಾಪನೆ ಮತ್ತು ಉಸ್ತುವಾರಿ
- ಗ್ರಾಮ ಮಟ್ಟದಲ್ಲಿ ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನ
- ಸೋಂಕು ಮತ್ತು ಇತರೇ ರೋಗ ಪ್ರತಿಬಂಧಕ ಕಾರ್ಯಕ್ರಮಗಳ ಅನುಷ್ಠಾನ
- ಸೋಂಕು ನಿವಾರಣೆ ಮತ್ತು ತಡೆಗಟ್ಟುವಿಕೆಯ ಕಾರ್ಯಕ್ರಮಗಳು
- ಗ್ರಾಮ ಮಟ್ಟದಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ವಿಲೇವಾರಿ ಕಾರ್ಯಕ್ರಮಗಳ ಅನುಷ್ಠಾನ
- ಬಾಣಂತಿತನ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳ ಸ್ಥಾಪನೆ

**19. ನೈರ್ಮಲ್ಯ**

- ಸಾರ್ವಜನಿಕ ಸ್ಥಳ, ಕೆರೆ, ಹೊಂಡ, ಬಾವಿ, ಚರಂಡಿ, ಸಾರ್ವಜನಿಕ ರಸ್ತೆಗಳನ್ನು ಸ್ವಚ್ಛಗೊಳಿಸುವುದು ಮತ್ತು ರಕ್ಷಣೆ ಮಾಡುವುದು
- ಬೇರೆ ಬೇರೆ ಸ್ಮಶಾನಗಳ ಸ್ಥಾಪನೆ ಮತ್ತು ನಿರ್ವಹಣೆ
- ತ್ಯಾಜ್ಯ ವಿಲೇವಾರಿ ವ್ಯವಸ್ಥೆಯ ಸ್ಥಾಪನೆ ಮತ್ತು ನಿರ್ವಹಣೆ
- ತ್ಯಾಜ್ಯಗಳ ಸಂಗ್ರಹಣೆ, ವಿಂಗಡನೆ ಮತ್ತು ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಸಾಗಾಟ
- ವೈಯಕ್ತಿಕ, ಸಮುದಾಯ ಸ್ನಾನ ಗ್ರಹ ಮತ್ತು ಶೌಚ ಗ್ರಹಗಳ ಸ್ಥಾಪನೆ ಮತ್ತು ನಿರ್ವಹಣೆ
- ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ, ಮನೆಗಳಲ್ಲಿ ಶೌಚಾಲಯ ಕಾರ್ಯಕ್ರಮ ಯೋಜನೆ ಮತ್ತು ಅನುಷ್ಠಾನ
- ಗ್ರಾಮ ಮಟ್ಟದ ಆರೋಗ್ಯ ಮತ್ತು ನೈರ್ಮಲ್ಯದ ನೀತಿ ನಿಯಮಾವಳಿಗಳನ್ನು ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸುವುದು
- ವಾರಸುದಾರು ಇಲ್ಲದ ಶವಗಳು ಮತ್ತು ಸತ್ತ ಪ್ರಾಣಿಯ ದೇಹಗಳ ವಿಲೇವಾರಿ

**20.ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಸಾಮರ್ಥ್ಯದ ಮತ್ತು ಮಾನಸಿಕ ಸವಾಲುಗಳುಳ್ಳವರ ಕಲ್ಯಾಣ.**

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ
- ಶಾಲಾ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಕಾರ್ಯಕ್ರಮಗಳ ಯೋಜನೆ, ಅನುಷ್ಠಾನ ಮತ್ತು ಉಸ್ತುವಾರಿ
- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಸಶಕ್ತತೆ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಸ್ಥಳೀಯ ಅಭಿವೃದ್ಧಿ ಏಜೆನ್ಸಿಗಳು, ಖಾಸಗೀ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳನ್ನು ಸೇರಿಸಿಕೊಂಡು ಯೋಜನೆ, ಅನುಷ್ಠಾನ.
- ಅಂಗನವಾಡಿಗಳ ಬಗ್ಗೆ ಪ್ರಸ್ಥಾವನೆಗಳನ್ನು ಸೂಕ್ತ ಪ್ರಾಧಿಕಾರಕ್ಕೆ ನೀಡಿ ಅಂಗೀಕಾರಕ್ಕಾಗಿ ಕಳಿಸುವುದು
- ಅಂಗನವಾಡಿಗಳ ಉಸ್ತುವಾರಿ
- ವಿವಿಧ ಸಮಾಜ ಕಲ್ಯಾಣ ಕಾರ್ಯಕ್ರಮಕ್ಕೆ, ಉದಾಹರಣೆಗಾಗಿ, ವಿಧವಾ ವೇತನ, ಅನಾಥರ ಪಿಂಚಣಿ, ವೃದ್ಧರ ಪಿಂಚಣಿ, ವಿಶೇಷ ಸಾರ್ಮರ್ಥ್ಯದವರ ಪಿಂಚಣಿ, ಮನಸ್ವಿನಿ ಮುಂತಾದ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ ಮಾಡಿ ಮಂಜೂರಾತಿ ಪಡೆದು ಹಂಚಿಕೆ.

- ಬಡವರಿಗಾಗಿ ಗುಂಪು ವಿಮಾ ಯೋಜನೆಯ ಅನುಷ್ಟಾನ
- ಸಾಮಾಜಿಕವಾಗಿ ಬದಿಗೊತ್ತಲ್ಪಟ್ಟ ಗುಂಪು, ಮಾನಸಿಕ ಸವಾಲುಗಳಿರುವ ವ್ಯಕ್ತಿಗಳಿಗೆ, ವಿಶೇಷ ಸಾಮರ್ಥ್ಯದ ವ್ಯಕ್ತಿಗಳಿಗೆ ಕಲ್ಯಾಣ ಕಾರ್ಯಕ್ರಮದ ಅನುಷ್ಟಾನ

**21. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಬೇರೆ ಹಿಂದುಳಿದ ವರ್ಗ ಜಾತಿಗಳ ಅಭಿವೃದ್ಧಿ**

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪೂರ್ವ ಪ್ರಾಥಮಿಕ ಶಾಲೆಗಳ ನಿರ್ವಹಣೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ವಸತಿ ಪ್ರದೇಶಗಳಿಗೆ ಮೂಲಭೂತ ಸೌಲಭ್ಯಗಳ ಪೂರೈಕೆ
- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯ, ಬೆಂಬಲ ನೀಡುವುದು.
- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರಿಗೆ ಕಾನೂನು ಜಾಗೃತಿಯ ಮಾಹಿತಿ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುವುದು
- ದುರ್ಬಲ ವರ್ಗದವರ ಕಲ್ಯಾಣ ಕಾರ್ಯಕ್ರಮಗಳ ಅನುಷ್ಟಾನ
- ಗ್ರಾಮ ಮಟ್ಟದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗದವರ ವಸತಿ ನಿಲಯಗಳ ಉಸ್ತುವಾರಿ

**22. ಜಾನುವಾರು ಸಾಕಣಿಕೆ ಕೇಂದ್ರಗಳು, ಕಾರು/ಆಟೋ/ರಿಕ್ಷಾ ಮತ್ತು ಬಸ್ ನಿಲ್ದಾಣಗಳು, ಎತ್ತಿನಗಾಡಿ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ**

- ಸಾಕಣಿಕೆ ಕೇಂದ್ರಗಳು, ಕಾರು/ಆಟೋ/ರಿಕ್ಷಾ ಮತ್ತು ಬಸ್ ನಿಲ್ದಾಣಗಳು, ಎತ್ತಿನಗಾಡಿ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ ಜನನ ಮರಣ ನೋಂದಾವಣೆ

**23. ಜನನ ಮರಣಗಳ ನೋಂದಾವಣೆ**

- ಜನನ ಮರಣಗಳ ನೋಂದಾವಣೆ ಅದರ ವಹಿ ನಿರ್ವಹಿಸುವುದು.

**24. ವಿವಾಹ ನೋಂದಾವಣೆ**

- ಎಲ್ಲಾ ಕಾಯ್ದೆಯ ಅಡಿಯಲ್ಲಿ ನಡೆದ ವಿವಾಹಗಳನ್ನು ನೋಂದಾವಣೆ ಮಾಡಿಕೊಳ್ಳುವುದು.

**25. ಎಲ್ಲಾ ದೃಢೀಕರಣ ಮತ್ತು ಪ್ರಮಾಣಪತ್ರ ನೀಡುವ ಅಧಿಕಾರ**

- ಎಲ್ಲಾ ರೀತಿಯ ದೃಢೀಕರಣ ಮತ್ತು ಪ್ರಮಾಣ ಪತ್ರ ನೀಡುವಿಕೆ ಉದಾಹರಣೆಗಾಗಿ, ವಾಸ್ತವ್ಯದ ದೃಢೀಕರಣ, ಜಾತಿ ದೃಢೀಕರಣ, ಆದಾಯದ ದೃಢೀಕರಣ, ವಿವಾಹ ಪ್ರಮಾಣ ಪತ್ರ, ಜನನ, ಮರಣಗಳ ಪ್ರಮಾಣ ಪತ್ರ ಹಾಗೂ ಗಣಿ ಮತ್ತು ಭೂವಿಜ್ಞಾನ, ಅಬಕಾರಿ, ಜೀವವೈವಿಧ್ಯ, ಭೂಪರಿವರ್ತನ, ವಾಣಿಜ್ಯ ಮುಂತಾದವುಗಳಿಗೆ ಸಂಬಂಧಿಸಿದ ನಿರಾಪೇಕ್ಷಣಾ ಪತ್ರ
- ಹೋಮ್‌ಸ್ಟೇ, ರೆಸಾರ್ಟ್ ಬಾರ್ ಮತ್ತು ರೆಸ್ಟೂರೆಂಟ್, ಹೋಟೇಲ್, ಮದ್ಯದ ಅಂಗಡಿಗಳು, ಬೇರೆ ಬೇರೆ ಸ್ಮಶಾನ, ವಧಾಗ್ರಹಗಳಿಗೆ ಪರವಾನಿಗೆ ನೀಡುವಿಕೆ

**26. ಅಂಕಿ ಅಂಶಗಳ ನಿರ್ವಹಣೆ**

- ಗ್ರಾಮ ಪಂಚಾಯತ್ ಮಟ್ಟದ ಎಲ್ಲಾ ಅಂಕಿ ಅಂಶಗಳ ಸಂಗ್ರಹಣೆ, ವರ್ಗೀಕರಣ, ವಿಂಗಡನೆ, ನವೀಕರಿಸುವುದು.

**27. ಯೋಜನೆ**

- ಪಂಚಾಯತ್ ಮಟ್ಟದ ಸಮೀಕ್ಷೆ, ಅಂಕಿ-ಅಂಶ, ಮಾಹಿತಿ ಸಂಗ್ರಹ, ವಿಷಯ ಸಂಗ್ರಹಕ್ಕೆ, ತಂತ್ರಜ್ಞರ, ವಿವಿದ ವಿಷಯ ತಜ್ಞರ, ಅನುಭವಿಗಳ ತಂಡವನ್ನು ರಚಿಸಿ ಸಮಗ್ರ ಯೋಜನೆ ತಯಾರಿಸಿ ಗ್ರಾಮ ಸಭೆ ಮುಂದೆ ಮಂಡನೆ

**28. ಸಹಕಾರ**

- ಸಹಕಾರಿ ಚಳುವಳಿಯನ್ನು ಗಟ್ಟಿಗೊಳಿಸಲು ಮತ್ತು ಜನಪ್ರಿಯಗೊಳಿಸಲು ವಿವಿಧ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪ್ರೋತ್ಸಾಹ

**29. ಗ್ರಾಮೀಣ ಪರಿಸರದ ಬಗ್ಗೆ ಮಾಹಿತಿ ಸಂಗ್ರಹ ಅದರ ಉಳಿಸಿಕೊಳ್ಳುವಿಕೆ, ರಕ್ಷಣೆಗಾಗಿ ಯೋಜನೆ ತಯಾರಿ ಮತ್ತು ಅನುಷ್ಠಾನ**

- ಗ್ರಾಮ ಮಟ್ಟದಲ್ಲಿ ಜೀವ ವೈವಿಧ್ಯ ನಿರ್ವಹಣ ಸಮಿತಿಯ ಸ್ಥಾಪನೆ
- ಜನರ ಜೀವ ವೈವಿಧ್ಯ ದಾಖಲೆಗಳ ನಿರ್ವಹಣೆ
- ಜೀವ ವೈವಿಧ್ಯ ರಕ್ಷಣೆಗೆ ಯೋಜನೆ, ಕಾರ್ಯಕ್ರಮ ರೂಪಿಸಿ ಅನುಷ್ಠಾನ
  - ಪರಿಸರ ಸೂಕ್ಷ್ಮ ಪ್ರದೇಶಗಳ ರಕ್ಷಣೆ
  - ಪರಿಸರ ರಕ್ಷಣೆಗೆ ಯೋಜನೆ ಮತ್ತು ಅನುಷ್ಠಾನ

**30. ಆದಾಯ ಮತ್ತು ಉತ್ಪಾದನಾ ಚಟುವಟಿಕೆ**

- ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ಆದಾಯ ಮತ್ತು ಉತ್ಪಾದನಾ ಚಟುವಟಿಕೆಗಳನ್ನು ಗುರುತಿಸಿ ಯೋಜಿಸಿ ಅನುಷ್ಠಾನಗೊಳಿಸುವುದು

**31. ಜ್ಞಾನ ನಿರ್ವಹಣೆ**

- ಪ್ರತಿ ಮನೆಯ ವಿವಿಧ ಮಾಹಿತಿಗಳ ಸಂಗ್ರಹಣೆ ಮತ್ತು ಕ್ರೋಢೀಕರಣ ಮತ್ತು ಆ ಅಂಕಿ-ಅಂಶಗಳ ನಿರ್ವಹಣೆ
- ಗ್ರಾಮದ ಪರಂಪರೆ, ಸಂಸ್ಕೃತಿ, ಇತಿಹಾಸಗಳ ದಾಖಲಾತಿ
- ಮಾನವ ಅಭಿವೃದ್ಧಿ ಅಧ್ಯಯನ ಮತ್ತು ಸಮೀಕ್ಷೆಗಳನ್ನು ನಡೆಸಿ ದಾಖಲಿಸುವುದು.
- ಮಾನವ ಅಭಿವೃದ್ಧಿ ಸೂಚ್ಯಂಕಗಳ ನಿಯತಕಾಲಿಕ ಗಣತಿ
- ಸಮಗ್ರ ಮಾಹಿತಿ ಮತ್ತು ಅಂಕಿ-ಅಂಶಗಳು ಜನರಿಗೆ ಸಿಗುವಂತೆ ಮಾಡುವುದು

**32. ಸಮುದಾಯದ ಆಸ್ತಿ ನಿರ್ವಹಣೆ**

- ಗ್ರಾಮ ಪಂಚಾಯತ್‌ನ ಸಮಸ್ತ ಆಸ್ತಿಗಳ ನಕ್ಷೆ, ಅಳತೆಗಳು, ಅಂಕಿ-ಅಂಶಗಳು ಸಮಗ್ರ ದಾಖಲಾತಿಗಳನ್ನು ಮಾಡಿ ದಾಖಲೆಗಳ ನಿರ್ವಹಣೆ ಮತ್ತು ಉಸ್ತುವಾರಿ
- ಗ್ರಾಮ ಪಂಚಾಯತ್‌ನ ಸಮಸ್ತ ಆಸ್ತಿಗಳು ಉದಾಹರಣೆ – ಕೆರೆ, ಕಟ್ಟೆ, ನೀರಿನ ಮೂಲಗಳು, ಕಾಲುವೆಗಳು, ಕೃಷಿ ಹೊಂಡ, ಬಾವಿ, ಕೊಳವೆಬಾವಿ ಮತ್ತು ಇತರ ಬಾವಿಗಳು, ಗೋಮಾಳ, ಕಾಡು, ಇತರ ಕಾಡು, ಉದ್ಯಾನವನ, ವಿವಿಧ ದಾರಿಗಳು, ಕಟ್ಟಡ ಮತ್ತು ಇತರ ರಚನೆಗಳ ಸಮಸ್ತ ಕ್ರಮಬದ್ಧ ದಾಖಲಾತಿ ಮಾಡಿ ದಾಖಲಾತಿಗಳ ನಿರ್ವಹಣೆ.

**ಅನುಸೂಚಿ 2: ತಾಲೂಕು ಪಂಚಾಯತ್**

**ಸಾಮಾನ್ಯ**

- ಒಂದು ತಾಲೂಕು ಪಂಚಾಯತ್ ಪ್ರದೇಶದಲ್ಲಿ **ಅನುಸೂಚಿ 2** ರಲ್ಲಿ ಹೇಳಿರುವ ಎಲ್ಲಾ ಕಾರ್ಯಕ್ರಮ ವಿಷಯಗಳನ್ನು ಯೋಜಿಸುವುದು ಅನುಷ್ಠಾನಿಸುವುದರ ಮೂಲಕ ಗ್ರಾಮ ಪಂಚಾಯತ್‌ನ ಕರ್ತವ್ಯ. ಮತ್ತು ಈ ಕರ್ತವ್ಯ ನಿರ್ವಹಿಸುವ ಬಗ್ಗೆ ಜವಾಬ್ದಾರಿ ಪಟ್ಟಿಯಲ್ಲಿ ವಿಷದವಾಗಿ ಹೇಳಲಾಗಿದೆ.
- ಈ ಕಾಯ್ದೆ ಮತ್ತು ಮಾರ್ಗದರ್ಶಿಯ ಇತರ ನಿಬಂಧನೆಗಳು, ಮತ್ತು ಸರ್ಕಾರದ ಹಣಕಾಸು, ತಾಂತ್ರಿಕ ಹಾಗೂ ಇತರ ಸಹಕಾರಗಳಿಗೆ ಸಂಬಂಧಿಸಿದಂತೆ **ಅನುಸೂಚಿ 2** ರಲ್ಲಿ ಹೇಳಿದ ವಿಷಯಗಳ ಕುರಿತಾದ

ಆಡಳಿತ ನಡೆಸಲು ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಯೋಜನೆಗಳನ್ನು ತಯಾರಿಸಲು ಮತ್ತು ಅನುಷ್ಠಾನಗೊಳಸಲು ತಾಲೂಕು ಪಂಚಾಯತ್ ವಿಶೇಷಾಧಿಕಾರ ಹೊಂದಿರುತ್ತದೆ,

- **ಅನುಸೂಚಿ 2** ರಲ್ಲಿ ಹೇಳಿರುವ ವಿಷಯಗಳನ್ನು ಅನುಷ್ಠಾನಿಸುವಲ್ಲಿ ಸಂಭಂದಪಟ್ಟ ಜವಾಬ್ದಾರ ವ್ಯಕ್ತಿಗಳು, ಕಾರ್ಯಗಳು ಮತ್ತು ಅದಕ್ಕಾಗಿ ಮೀಸಲಿಟ್ಟ ಹಣಕಾಸು ಈ ಮೂರು ವಿಷಯಗಳು ತಾಲೂಕು ಪಂಚಾಯತ್ ಅಧೀನಕ್ಕೆ ಬರತಕ್ಕದ್ದು.

1. **ಕೃಷಿ, ತೋಟಗಾರಿಕೆ ಮತ್ತು ರೇಷ್ಮೆಹುಳು ಸಾಕಣಿ**

- ಯೋಜನೆ ತಯಾರಿ ಮತ್ತು ಗ್ರಾಮೀಣ ಸಮಗ್ರ ಕೃಷಿ ಮತ್ತು ತೋಟಗಾರಿಕಾ ಯೋಜನೆ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಾಮಾನ್ಯ ಮತ್ತು ತಾಂತ್ರಿಕ ತರಭೇತಿಗಳನ್ನು ನಡೆಸಲು ಯೋಜನೆ ಮತ್ತು ಅನುಷ್ಠಾನ.
- ಕೃಷಿ ಮೇಳಗಳನ್ನು ನಡೆಸುವುದು
- ತರಬೇತಿಗಳನ್ನು ನಡೆಸಲು ತಜ್ಞರನ್ನು ಒದಗಿಸುವ ಮೂಲಕ ತಾಂತ್ರಿಕ ನೆರವು
- ಗೋದಾಮುಗಳು ಮತ್ತು ಶೀತಲ ಸಂಗ್ರಹಾಲಯಗಳ ಸ್ಥಾಪನೆ, ತಾಲೂಕು ಮಟ್ಟದಲ್ಲಿ ಕೃಷಿ ಸಹಕಾರ ಸಂಘಗಳ ಸ್ಥಾಪನೆ ಮತ್ತು ಅವುಗಳ ನೋಂದಾವಣೆ, ಕೃಷಿ ಮಾರುಕಟ್ಟೆಗಳ ಸ್ಥಾಪನೆ ಮತ್ತು ನಿರ್ವಹಣೆ, ತಾಲೂಕು ಮಟ್ಟದಲ್ಲಿ ಮೂಲ ಸೌಕರ್ಯಗಳ ಸ್ಥಾಪನೆ ಮತ್ತು ನಿರ್ವಹಣೆ
- ಗ್ರಾಮ ಪಂಚಾಯತ್‌ಗಳಿಂದ ಸಂಗ್ರಹಿಸಲ್ಪಟ್ಟ ದತ್ತಾಂಶಗಳ ಕ್ರೋಢೀಕರಣ, ಕೃಷಿ ಉತ್ಪನ್ನಗಳು ಮತ್ತು ಮಾರುಕಟ್ಟೆಯ ಬಗ್ಗೆ ತಾಲೂಕು ಮಟ್ಟದ ಯೋಜನೆಗಳ ತಯಾರಿ

2. **ಸಣ್ಣ ನೀರಾವರಿ**

- ಒಂದಕ್ಕಿಂತ ಹೆಚ್ಚು ಪಂಚಾಯತ್‌ಗಳನ್ನೊಳಗೊಂಡ ಎಲ್ಲಾ ಸಣ್ಣ ನೀರಾವರಿ ಯೋಜನೆಗಳು ಮತ್ತು ಏತ ನೀರಾವರಿ ಯೋಜನೆಗಳ ಅನುಷ್ಟಾನ ಮತ್ತು ನಿರ್ವಹಣೆ

3. **ಪಶು ಸಂಗೋಪನೆ ಹೈನುಗಾರಿಕೆ, ಕೋಳಿ ಸಾಕಣೆ**

- ಸಂಚಾರಿ ಆಸ್ಪತ್ರೆಗಳೂ ಸೇರಿ ತಾಲೂಕು ಮಟ್ಟದಲ್ಲಿ ಪಶು ಆಸ್ಪತ್ರೆಗಳು ಮತ್ತು ಪಾಲಿ ಕ್ಲಿನಿಕ್‌ಗಳ ಸ್ಥಾಪನೆ ಮತ್ತು ನಿರ್ವಹಣೆ
- ಅಂಟುರೋಗಗಳು ಮತ್ತು ಜಾಡ್ಯಗಳನ್ನು ತಡೆಯಲು ಗ್ರಾಮ ಪಂಚಾಯತ್‌ಗಳಿಗೆ ಅಗತ್ಯವಿರುವ ರಕ್ಷಣಾ ವ್ಯವಸ್ಥೆಗಳು, ಖಾಲಿ ಹುದ್ದೆಗಳ ಭರ್ತಿ, ಔಷಧಗಳು, ವೈದ್ಯಕೀಯ ನೆರವುಗಳನ್ನು ಒದಗಿಸುವುದು.
- ತರಬೇತಿಗಳನ್ನು ನಡೆಸಲು ತಾಂತ್ರಿಕ ತಜ್ಞರ ನೆರವನ್ನು ಒದಗಿಸುವುದು
- ಪಶು ಸಂಗೋಪನೆ ಹೈನುಗಾರಿಕೆ, ಕೋಳಿ ಸಾಕಣೆ ಮುಂತದ ಚಟುವಟಿಕೆಗಳಿಗೆ ಸಹಕಾರ ಸಂಘಗಳನ್ನು ಸ್ಥಾಪಿಸುವುದು ಮತ್ತು ನೋಂದಾಯಿಸಿಕೊಳ್ಳುವುದು
- ಪಶು ಸಂಗೋಪನಾ ಕಾರ್ಯಗಳಿಗೆ ಅಗತ್ಯವಿರುವ ಭೂಮಿ ಖರೀದಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಯೋಜನೆಗಳು.

4. **ಸಾಮಾಜಿಕ ಅರಣ್ಯ**

- ನಿಯಂತ್ರಣಗಳೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ರಸ್ತೆಗಳ ಬದಿಯಲ್ಲಿ ಗಿಡ-ಮರಗಳನ್ನು ಬೆಳೆಸುವುದು ಮತ್ತು ಅವುಗಳ ರಕ್ಷಣೆ.
- ಗ್ರಾಮ ಪಂಚಾಯತ್‌ಗಳಿಗೆ ಅಗತ್ಯವಿರುವ ಸಸ್ಯಗಳ ಉತ್ಪಾದನೆ ಮತ್ತು ಸಸ್ಯಗಳು ಹಾಗೂ ಬೀಜಗಳ ವಿತರಣೆ
- ಗ್ರಾಮ ಪಂಚಾಯತ್‌ಗಳಿಗೆ ತರಬೇತಿ, ಕಾರ್ಯಾಗಾರಗಳನ್ನು ನಡೆಸಲು ಅಗತ್ಯವಿರುವ ತಾಂತ್ರಿಕ ಮಾಹಿತಿಯನ್ನು ಒದಗಿಸುವುದು.

5. **ಪ್ರವಾಸೋದ್ಯಮ**
  - ತಾಲೂಕುಗಳ ಗ್ರಾಮದಲ್ಲಿರುವ ಪ್ರವಾಸಿ ತಾಣಗಳ ಗುರುತಿಸುವಿಕೆ ಮತ್ತು ಅಭಿವೃದ್ಧಿ
  - ತಾಲೂಕಿನ ಪ್ರವಾಸೋದ್ಯಮ ಚಟುವಟಿಕೆಗಳ ನೀತಿ ಮತ್ತು ನಿಯಮಗಳನ್ನುರೂಪಿಸುವುದು
  - ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
  - ಪ್ರವಾಸಿ ತಾಣಗಳನ್ನು ಆಕರ್ಷಣೀಯವಾಗಿ ಮಾಡುವುದು ಮತ್ತು ಅದರ ನಿರ್ವಹಣೆ
  - ಪ್ರವಾಸಿ ಮಾರ್ಗದರ್ಶಿ, ಹಸಿರು ಪೋಲೀಸ್ ಮತ್ತು ಜೀವರಕ್ಷಕ ವ್ಯಕ್ತಿಗಳನ್ನು ಪ್ರವಾಸಿ ತಾಣಗಳಲ್ಲಿ ನೇಮಕ ಮಾಡುವುದು
  - ಪ್ರವಾಸಿ ತಾಣಗಳಲ್ಲಿ ಪ್ರವೇಶ ಶುಲ್ಕ ಮತ್ತು ನಿಲುಗಡೆಯ ಶುಲ್ಕಗಳ ಸಂಗ್ರಹಣೆ
6. **ಸಣ್ಣ ಕೈಗಾರಿಕೆಗಳು ಮತ್ತು ಗ್ರಾಮೀಣ ಉದ್ಯಮಗಳು – ಖಾದಿ, ಕರಕುಶಲ ಕೈಗಾರಿಕೆ, ಗ್ರಾಮೋದ್ಯಮಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು**
  - ಗುಡಿ ಕೈಗಾರಿಕೆ ಮತ್ತು ಗ್ರಾಮೀಣ ಕೈಗಾರಿಕೆ, ಖಾದಿ, ಕರಕುಶಲ ಕೈಗಾರಿಕೆ , ಆಹಾರ ಸಂಸ್ಕರಣಾ ಕೈಗಾರಿಕೆಗಳ ಸ್ಥಾಪನೆಗೆ ತಾಂತ್ರಿಕ ಉತ್ತೇಜನ ಮತ್ತು ಇತರೇ ಕೃಷಿಯೇತರ ಚಟುವಟಿಕೆಗಳು
  - ಕಿರು ಕೈಗಾರಿಕಾ ಭೂಮಿಗಳ ಸ್ಥಾಪನೆ
  - ಸ್ವಂತ ಉದ್ಯೋಗ ಯೋಜನೆಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಸುವುದು
  - ಗ್ರಾಮ ಪಂಚಾಯತ್‌ಗಳ ಗುಂಪುಗಳಿಗೆ ಅಥವಾ ಗ್ರಾಮ ಪಂಚಾಯತ್ ಕ್ಲಸ್ಟರ್‌ಗಳಿಗೆ ಮಾಹಿತಿ ಸೇವೆ ಮತ್ತು ಸಾಮಾನ್ಯ ಸೌಲಭ್ಯಗಳ ಕೇಂದ್ರಗಳ ರಚನೆ.
  - ಕ್ಲಸ್ಟರ್ ಮಟ್ಟದ ಸಾಮಾನ್ಯ ಸೌಲಭ್ಯಗಳ ಕೇಂದ್ರಗಳಿಗೆ ಹಣಕಾಸಿನ ನೆರವು ಒದಗಿಸುವುದು
  - ಬ್ಲಾಕ್ ಅಥವಾ ಹೊಬಳ ಮಟ್ಟದಲ್ಲಿ ಸಾಮಾನ್ಯ ಸೌಲಭ್ಯಗಳ ಕೇಂದ್ರಗಳ ನಿರ್ವಹಣೆ
7. **ಗ್ರಾಮೀಣ ವಸತಿ**
  - ಕಡಿಮೆ ವೆಚ್ಚದ ಮನೆಗಳ ನಿರ್ಮಾಣಕ್ಕೆ ಸೂಕ್ತವಾದ ತಂತ್ರಜ್ಞಾನಗಳನ್ನು ಪಡೆದುಕೊಂಡು ಗ್ರಾಮ ಪಂಚಾಯತ್‌ಗಳಿಗೆ ವಿತರಿಸುವುದು.
  - ಗ್ರಾಮ ಪಂಚಾಯತ್‌ಗಳಿಗೆ ತಾಂತ್ರಿಕ ಪರಿಣಿತಿ ಮತ್ತು ಇತರ ಮಾಹಿತಿ ನೀಡುವುದು
  - ತಾಲೂಕು ಮಟ್ಟದ ವಸತಿ ಸಹಕಾರಿ ಸಂಘಗಳನ್ನು ಉತ್ತೇಜಿಸುವುದು.
8. **ಕುಡಿಯುವ ನೀರು ಪೂರೈಕೆ**
  - ಕ್ಲಸ್ಟರ್ ಮಟ್ಟದಲ್ಲಿ ಕುಡಿಯುವ ನೀರು ಪೂರೈಕೆಯ ವ್ಯವಸ್ಥೆಗಳ ನಿರ್ಮಾಣ
  - ಕುಡಿಯುವ ನೀರು ಪೂರೈಕೆಯನ್ನು ಅನುಷ್ಠಾಗೊಳಸಲು ಗ್ರಾಮ ಪಂಚಾಯತ್‌ಗಳಿಗೆ ಮಾಹಿತಿ ಮತ್ತು ತಾಂತ್ರಿಕ ನೆರವು ಒದಗಿಸುವುದು.
  - ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು ಅನುಷ್ಠಾನಗೊಳಸುವುದು.

9. **ಸಾರ್ವಜನಿಕ ಕಾಮಗಾರಿಗಳು, ನಗರ ಮತ್ತು ಗ್ರಾಮಾಂತರ ಯೋಜನೆಗಳು (ರಸ್ತೆ, ಸೇತುವೆ, ಹಾಯ್ಗಡ, ಜಲಮಾರ್ಗ, ಇತರ ಸಂಪರ್ಕಿಸುವ ಮಾರ್ಗಗಳು)**
  - ತಾಲೂಕಿನ ಒಂದಕ್ಕಿಂತ ಹೆಚ್ಚಿನ ಗ್ರಾಮ ಪಂಚಾಯತ್ ಮಟ್ಟದಲ್ಲಿ ಈ ಕೆಳಗಿನವುಗಳ ಯೋಜನೆ, ರಚನೆ ಮತ್ತು ನಿರ್ವಹಣೆ

  – ರಸ್ತೆಗಳು

  – ಕಾಲುದಾರಿ, ಪಾದಚಾರಿ ಮಾರ್ಗ ಮತ್ತು ಓಣಿ

– ತಾಲೂಕು ರಸ್ತೆಗಳು

– ಸೇತುವೆ, ಸಂಕ, ಮೋರಿಗಳು

– ಕಟ್ಟಡಗಳು

– ಚರಂಡಿಗಳು ಇತ್ಯಾದಿ

- ಜಲಮಾರ್ಗಗಲು, ಬೋಟ್‌ಗಳು, ಕಾಲುವೆಗಳು ಮತ್ತು ಪೇರ್ರಿಗಳ ನಿರ್ವಹಣೆ
- ಪ್ರೌಢ ಶಾಲಾ ಕಟ್ಟಡಗಳು, ತಾಲೂಕು ಆಸ್ಪತ್ರೆಗಳು ಮತ್ತು ತಾಲೂಕು ಮಟ್ಟದ ಇತರ ಸಾಮಾಜಿಕ ಸಂಸ್ಥೆಗಳ ಯೋಜನೆ, ರಚನೆ ಮತ್ತು ನಿರ್ವಹಣೆ

**10. ಗ್ರಾಮೀಣ ವಿದ್ಯುದೀಕರಣ,/ವಿದ್ಯುತ್ ಮತ್ತು ಇಂಧನ**

- ವಿದ್ಯುತ್ ಪೂರೈಕಾ ಏಜೆನ್ಸಿಯ ಸಹಯೋಗದೊಂದಿಗೆ ವಿಶೇಷ ಸಮಾರಂಭಗಳು, ಮುಖ್ಯವಾದ ಋತುಗಳಲ್ಲಿ ಗುಣಮಟ್ಟದ ಮತ್ತು ನಿರಂತರವಾದ ವಿದ್ಯುತ್ ಪೂರೈಕೆ.
- ಮಧ್ಯಮ ವರ್ಗದ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಇಂಧನಗಳ ಘಟಕಗಳ ಯೋಜನೆ, ಸ್ಥಾಪನೆ ಮತ್ತು ನಿರ್ವಹಣೆ.
- ಉಳಿಕೆಯ ವಿದ್ಯುತ್ ಅಥವಾ ಶಕ್ತಿಯ ಇಂಧನಗಳ ಇತರರಿಗೆ ಮಾರಟ

**11. ಬಡತನ ನಿವಾರಣೆ**

- ಗ್ರಾಮ ಪಂಚಾಯತ್‌ಗಳ ಬಡತನ ನಿವಾರಣಾ ಕಾರ್ಯಕ್ರಮಕ್ಕೆ ಅಗತ್ಯವಿರುವ ಮಾಹಿತಿ ಮತ್ತು ತಂತ್ರಗಳನ್ನು ಒದಗಿಸುವುದು.
- ಸ್ವಯಂ ಉದ್ಯೋಗದ ಕಾರ್ಯಕ್ರಮಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

**12. ಸಾಮಾಜಿಕ ವಿತರಣಾ ವ್ಯವಸ್ಥೆ**

- ಆಹಾರ ಧಾನ್ಯಗಳು ಮತ್ತು ದೈನಂದಿನ ಅಗತ್ಯತೆಗಳನ್ನು ಸಾರ್ವಜನಿಕ ವಿತರಣೆ ಮಾಡುವುದು

**13. ವಿಪತ್ತು ನಿರ್ವಹಣೆ**

- ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಮಟ್ಟದಲ್ಲಿ ವಿಪತ್ತು ನಿರ್ವಹಣಾ ಕಾರ್ಯಕ್ರಮಗಳ ಬಗ್ಗೆ ತರಬೇತಿಗಳನ್ನು ನಡೆಸುವುದು.

**14. ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ, ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ)**

- ಪ್ರೌಢ ಶಾಲೆಗಳ ಪ್ರಸ್ಥಾವನೆಗಳ ತಯಾರಿ ಮತ್ತು ಮಾನ್ಯತೆಗೆ ಸೂಕ್ತ ಪ್ರಾಧಿಕಾರಕ್ಕೆ ರವಾನೆ
- ಸರ್ಕಾರಿ ಪ್ರೌಢ ಶಾಲೆಗಳ ಉಸ್ತುವಾರಿ
- ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಕೇಂದ್ರಗಳ ಉಸ್ತುವಾರಿ
- ಆಶ್ರಮ ಶಾಲೆಗಳು, ಪ್ರೌಢ ಶಾಲಾ ಹಂತದವರೆಗಿನ ವಸತಿ ಶಾಲೆಗಳು, ಅನಾಥಾಲಯಗಳ ಬಗ್ಗೆ ಯೋಜನೆ ಸ್ಥಾಪನೆ ಮತ್ತು ನಿರ್ವಹಣೆ
- ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯದ ಪ್ರಾಯೋಜಕ ಕಾರ್ಯಕ್ರಮಗಳ ಸಂಯೋಜನೆ
- ಸರ್ಕಾರಿ ಪ್ರೌಢ ಶಾಲೆಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ
- ಸರ್ಕಾರಿ ಕೈಗಾರಿಕೆಯ ತರಬೇತಿ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ
- ಹಿಂದುಳಿದ ವರ್ಗಗಳು ಮತ್ತು  ಗುಂಪುಗಳು, ಹೆಣ್ಣುಮಕ್ಕಳು, ವಿಶೇಷ ಸಾಮರ್ಥ್ಯದ ಮಕ್ಕಳು ಅಲ್ಪ ಸಂಖ್ಯಾತ ಮಕ್ಕಳಿಗೆ, ಪ್ರೌಢ ಶಾಲಾ ಮಟ್ಟದಲ್ಲಿರುವ ಆಶ್ರಮ ಶಾಲೆ ವಸತಿ ಶಾಲೆಗಳಿಗೆ ಯೋಜನೆ, ಅನುಷ್ಠಾನ ಮತ್ತು ನಿರ್ವಹಣೆ

- ತಾಲೂಕು ಪಂಚಾಯತ್ ಉಸ್ತುವಾರಿಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಧ್ಯಕಾಲಿಕ ಶಿಕ್ಷಕರು (stop gap teachers), ಅರೆಕಾಲಿಕ ಮತ್ತು ಗೌರವ ಶಿಕ್ಷಕರ ನೇಮಕ

**15. ಗ್ರಂಥಾಲಯಗಳು**

- ತಾಲೂಕು ಮಟ್ಟದ ಗ್ರಂಥಾಲಯಗಳು ಮತ್ತು ವಾಚನಾಲಯಗಳ ಯೋಜನೆ, ಅನುಷ್ಠಾನ ಮತ್ತು ಸ್ಥಾಪನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆ
- ಗ್ರಂಥಪಾಲಕರು ಮತ್ತು ಇತರ ಸಿಬ್ಬಂದಿಗಳ ನೇಮಕ

**16. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**

- ಯುವಕ/ಯುವತಿಯರೂ ಸೇರಿದಂತೆ, ಸಾಂಸ್ಕೃತಿಕ ತಂಡಗಳು ಅವರ ಪ್ರತಿಭೆ ಮತ್ತು ಕಲೆಗಳ ಅನಾವರಣಕ್ಕೆ ಉತ್ತಮ ವೇದಿಕೆಯನ್ನು ನಿರ್ಮಾಣ ಮಾಡುವುದು.
- ತಾಲೂಕು ಮಟ್ಟದಲ್ಲಿ ಯುವಜನೋತ್ಸವಗಳನ್ನು ನಡೆಸುವುದು.
- ಯುವ ಸಮುದಾಯಕ್ಕಾಗಿ ತಾಲೂಕು ಮಟ್ಟದಲ್ಲಿ ಯುವ ಕೇಂದ್ರಗಳ ಸ್ಥಾಪನೆ

**17. ಜಾನುವಾರು ಮೇಳಗಳು ಸೇರಿದಂತೆ ಮಾರುಕಟ್ಟೆ ಮತ್ತು ಜಾತ್ರೆ**

- ತಾಲೂಕು ಮಟ್ಟದ ಸಾರ್ವಜನಿಕ ಮಾರುಕಟ್ಟೆಗಳ ಸ್ಥಾಪನೆ ಮತ್ತು ನಿರ್ವಹಣೆ
- ಜಾನುವಾರು ಜಾತ್ರೆ, ಸೇರಿ ಇತರ ಜಾತ್ರೆ ಪರೀಶೆ, ಉತ್ಸವಗಳನ್ನು ನಡೆಸಲು ನೀತಿ ನಿಯಮಗಳನ್ನು ರೂಪಿಸುವುದು

**18. ಸಾರ್ವಜನಿಕ ಆರೋಗ್ಯ (ಆರೋಗ್ಯ, ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು), ಕುಟುಂಬ ಕಲ್ಯಾಣ**

- ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲೂಕು ಆಸ್ಪತ್ರೆಗಳಿಗೆ ಪ್ರಸ್ತಾವನೆಗಳನ್ನು ಸೂಕ್ತ ಪ್ರಾಧಿಕಾರ ಅಥವಾ ಸರ್ಕಾರಕ್ಕೆ ಅನುಮತಿಗಾಗಿ ಕಳಿಸುವುದು.
- ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲೂಕು ಆಸ್ಪತ್ರೆಗಳ ನಿರ್ವಹಣೆ
- ಆರೋಗ್ಯ ಸೇವೆಗಳ ನಿರ್ವಹಣೆ ಮತ್ತು ನೈರ್ಮಲ್ಯ ಕಾರ್ಯಕ್ರಮಗಳ ವ್ಯವಸ್ಥೆಗಳು/ಸಲಕರಣೆಗಳ ಸ್ಥಾಪನೆಗೆ ಗ್ರಾಮ ಪಂಚಾಯತ್‌ಗಳಿಗೆ ನಿರಂತರ ನೆರವು.
- ವಿಶೇಷ ವರ್ಗಗಳಿಗೆ ಮತ್ತು ವಿಶೇಷ ಮತ್ತು ಮಾನಸಿಕ ಸವಾಲುಳ್ಳವರ ಸೇವೆಗೆ ಸೌಲಭ್ಯಗಳು ಮತ್ತು ಕೇಂದ್ರಗಳ ನಿರ್ಮಾಣ.
- ಗ್ರಾಮ ಪಂಚಾಯತ್‌ಗಳಿಗೆ ನೀಡಲು ತಾಲೂಕು ಮಟ್ಟದಲ್ಲಿ ಲ್ಯಾಬೋರೇಟರಿಗಳು ಮತ್ತು ವಿಚಾರಣಾ (ಪರೀಕ್ಷಣಾ) ಸೇವೆಗಳ ಸ್ಥಾಪನೆ.
- ತಾಲೂಕು ಮಟ್ಟದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನ

**19. ನೈರ್ಮಲ್ಯ**

- ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣಾ ಪ್ಲ್ಯಾಂಟ್‌ಗಳ ಸ್ಥಾಪನೆ ಮತ್ತು ನಿರ್ವಹಣೆ

**20. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಸಾಮರ್ಥ್ಯದ ಮತ್ತು ಮಾನಸಿಕ ಸವಾಲುಗಳುಳ್ಳವರ ಕಲ್ಯಾಣ**

- ತಾಲೂಕು ಮಟ್ಟದಲ್ಲಿ ICDS ಕಾರ್ಯಕ್ರಮಗಳ ಯೋಜನೆ, ಅನುಷ್ಠಾನ ಮತ್ತು ನಿರ್ವಹಣೆ
- ತಾಲೂಕು ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಸಶಕ್ತತೆ ಕಾರ್ಯಕ್ರಮಗಳನ್ನು ನಡೆಸಲು ಪ್ರೋತ್ಸಾಹ
- ಶಾಲಾ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಕಾರ್ಯಕ್ರಮಗಳಿಗೆ ಉತ್ತೇಜನ
- ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಸ್ಥಾಪನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆ

**21. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ್ಧ ಮತ್ತು ಇತರ ಹಿಂದುಳಿದ ವರ್ಗ ಜಾತಿಗಳ ಅಭಿವೃದ್ಧಿ**

- ತಾಲೂಕು ಮಟ್ಟದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಹಾಗೂ ಹಿಂದುಳಿದ ಸಮುದಾಯದವರ ಆಶ್ರಮ ಶಾಲೆಗಳ ಮತ್ತು ವಸತಿ ನಿಲಯಗಳ ಯೋಜನೆ, ಸ್ಥಾಪನೆ ಮತ್ತು ನಿರ್ವಹಣೆ
- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳ ಸ್ಥಾಪನೆ ಮತ್ತು ನಿರ್ವಹಣೆ.
- ತಾಲೂಕು ಮಟ್ಟದಲ್ಲಿ ಹಿಂದುಳಿದ ಸಮುದಾಯಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಾಮಾಜಿಕ, ಸಾಂಸ್ಕೃತಿಕ, ಸಾಂಪ್ರದಾಯಿಕ ಪ್ರಾಕಾರಗಳ ರಕ್ಷಣೆ ಮತ್ತು ಉತ್ತೇಜನಕ್ಕೆ ಕಾರ್ಯಕ್ರಮಗಳ ಅನುಷ್ಟಾನ
- ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಸ್ಥಾಪನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆ

22. **ಜಾನುವಾರು ಸಾಕಣಿಕೆ ಕೇಂದ್ರಗಳು, ಕಾರು/ಆಟೋ/ರಿಕ್ಷಾ ಮತ್ತು ಬಸ್ ನಿಲ್ದಾಣಗಳು, ಎತ್ತಿನಗಾಡಿ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ**

- ತಾಲೂಕು ಬಸ್ ನಿಲ್ದಾಣಗಳ ನಿರ್ಮಾಣ ಮತ್ತು ನಿರ್ವಹಣೆ

23. **ಅಂಕಿ-ಅಂಶಗಳ ನಿರ್ವಹಣೆ**

- ತಾಲೂಕು ಅಂಕಿ-ಅಂಶಗಳ ನಿರ್ವಹಣೆ

24. **ಯೋಜನೆ**

- ತಾಲೂಕು ಮಟ್ಟದ ಯೋಜನೆಯ ಸಮಿತಿಯು ಗ್ರಾಮ ಪಂಚಾಯತ್‌ಗಳಿಂದ ಸ್ವೀಕರಿಸಿದ ಯೋಜನೆಗಳ ಕ್ರೋಢೀಕರಣ, ತಾಲೂಕು ಮಟ್ಟದ ಯೋಜನೆಗಳ ತಯಾರಿ, ಅಂಗೀಕಾರ ಮತ್ತು ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು.
- ಯೋಜನೆಗೆ ಬೇಕಾಗುವ ಮಾಹಿತಿ, ಅಂಕಿ-ಅಂಶಗಳ ಸಂಗ್ರಹಣೆಗೆ, ಗ್ರಾಮ ಪಂಚಾಯತ್‌ಗೆ ತಾಂತ್ರಿಕ ತಜ್ಞರ ನೆರವನ್ನು ಒದಗಿಸುವುದು.
- ತಾಲೂಕು ಮಟ್ಟದ ಯೋಜನಾ ಸಮಿತಿ ರಚನೆ

25. **ಸಹಕಾರ**

- ಬ್ಲಾಕ್ ಅಥವಾ ತಾಲೂಕು ಮಟ್ಟದ ಸಹಕಾರ ಸಂಘಗಳ ನೋಂದಾವಣೆ ಮತ್ತು ಮೇಲ್ವಿಚಾರಣೆ

26. **ಗ್ರಾಮೀಣ ವಾತಾವರಣ ಮತ್ತು ಪರಿಸರ**

- ಗ್ರಾಮೀಣ ವಾತಾವರಣ ಮತ್ತು ಪರಿಸರ ರಕ್ಷಣೆಗಾಗಿ ಗ್ರಾಮ ಪಂಚಾಯತ್‌ಗಳಿಗೆ ತಾಂತ್ರಿಕ ನೆರವು ಒದಗಿಸುವುದು.

27. **ಜ್ಞಾನ ನಿರ್ವಹಣೆ**

- ತಾಲೂಕು ಅಂಕಿ-ಅಂಶಗಳ ಸಂಗ್ರಹ ಮತ್ತು ಕ್ರೋಢೀಕರಣ ಮತ್ತು ಅಂಕಿ-ಅಂಶಗಳ ನಿರ್ವಹಣೆ
- ತಾಲೂಕಿನ ಪರಂಪರೆ, ಸಂಸ್ಕೃತಿ, ಇತಿಹಾಸಗಳ ದಾಖಲಾತಿ
- ಮಾನವ ಅಭಿವೃದ್ಧಿ ಅಧ್ಯಯನ ಮತ್ತು ಸಮೀಕ್ಷೆಗಳನ್ನು ನಡೆಸಿ ದಾಖಲಿಸುವುದು.
- ಮಾನವ ಅಭಿವೃದ್ಧಿ ಸೂಚ್ಯಂಕಗಳ ನಿಯತಕಾಲಿಕ ಗಣತಿ
- ಸಮಗ್ರ ಮಾಹಿತಿ ಮತ್ತು ಅಂಕಿ-ಅಂಶಗಳು ಜನರಿಗೆ ಸಿಗುವಂತೆ ಮಾಡುವುದು

28. **ಸಮುದಾಯದ ಆಸ್ತಿ ನಿರ್ವಹಣೆ**

- ತಾಲೂಕು ಮುಖ್ಯ ಕಛೇರಿಗಳ ಸಮಸ್ತ ಆಸ್ತಿಗಳ ನಕ್ಷೆ, ಅಳತೆಗಳು, ಅಂಕಿ-ಅಂಶಗಳು ಸಮಗ್ರ ದಾಖಲಾತಿಗಳನ್ನು ಮಾಡಿ ದಾಖಲೆಗಳ ನಿರ್ವಹಣೆ ಮತ್ತು ಉಸ್ತುವಾರಿ

**ಅನುಸೂಚಿ 3: ಜಿಲ್ಲಾ ಪಂಚಾಯತ್**

**ಸಾಮಾನ್ಯ**

- ಒಂದು ಜಿಲ್ಲಾ ಪಂಚಾಯತ್ ಪ್ರದೇಶದಲಿ **ಅನುಸೂಚಿ 3** ರಲ್ಲಿ ಹೇಳಿರುವ ಎಲ್ಲಾ ಕಾರ್ಯಕ್ರಮ ವಿಷಯಗಳನ್ನು ಯೋಜಿಸುವುದು ಅನುಷ್ಠಾನಿಸುವುದರ ಮೂಲಕ ಗ್ರಾಮ ಪಂಚಾಯತ್‌ನ ಕರ್ತವ್ಯ. ಮತ್ತು ಈ ಕರ್ತವ್ಯ ನಿರ್ವಹಿಸುವ ಬಗ್ಗೆ ಜವಾಬ್ದಾರಿ ಪಟ್ಟಿಯಲ್ಲಿ ವಿಷದವಾಗಿ ಹೇಳಲಾಗಿದೆ.
- ಈ ಕಾಯ್ದೆ ಮತ್ತು ಮಾರ್ಗದರ್ಶಿಯ ಇತರ ನಿಬಂಧನೆಗಳು, ಮತ್ತು ಸರ್ಕಾರದ ಹಣಕಾಸು, ತಾಂತ್ರಿಕ ಹಾಗೂ ಇತರ ಸಹಕಾರಗಳಿಗೆ ಸಂಬಂಧಿಸಿದಂತೆ **ಅನುಸೂಚಿ 3** ರಲ್ಲಿ ಹೇಳಿದ ವಿಷಯಗಳ ಕುರಿತಾದ ಆಡಳಿತ ನಡೆಸಲು ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಯೋಜನೆಗಳನ್ನು ತಯಾರಿಸಲು ಮತ್ತು ಅನುಷ್ಟಾನಗೊಳಿಸಲು ಜಿಲ್ಲಾ ಪಂಚಾಯತ್ ವಿಶೇಷಾಧಿಕಾರ ಹೊಂದಿರುತ್ತದೆ,
- **ಅನುಸೂಚಿ 3** ರಲ್ಲಿ ಹೇಳಿರುವ ವಿಷಯಗಳನ್ನು ಅನುಷ್ಠಾನಿಸುವಲ್ಲಿ ಸಂಭಂದಪಟ್ಟ ಜವಾಬ್ದಾರ ವ್ಯಕ್ತಿಗಳು, ಕಾರ್ಯಗಳು ಮತ್ತು ಅದಕ್ಕಾಗಿ ಮೀಸಲಿಟ್ಟ ಹಣಕಾಸು ಈ ಮೂರು ವಿಷಯಗಳು ಜಿಲ್ಲಾ ಪಂಚಾಯತ್ ಅಧೀನಕ್ಕೆ ಬರತಕ್ಕದ್ದು.

1. **ಕೃಷಿ, ತೋಟಗಾರಿಕೆ ಮತ್ತು ರೇಷ್ಮೆಹುಳು ಸಾಕಣೆ**
   - ಜೈವಿಕ ತಂತ್ರಜ್ಞಾನದ ಮತ್ತು ಮಾರುಕಟ್ಟೆ, ಅಭಿವೃದ್ಧಿಗೆ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ಹೆಚ್ಚಿಸಲು ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.
   - ಒಂದಕ್ಕಿಂತ ಹೆಚ್ಚು ತಾಲೂಕುಗಳನ್ನೊಳಗೊಂಡ ಸಂಪೂರ್ಣ ಜಲಾನಯನ ಯೋಜನೆಯ ನಿರ್ವಹಣೆ
   - ಕೃಷಿ ಸಂಬಂಧಿತ ಮಾಹಿತಿಗಳನ್ನು ಒದಗಿಸುವುದು
   - ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ
   - ಯೋಜನೆಗಳನ್ನು ಪ್ರಾರಂಭಿಸಲು ಮತ್ತು ಜನಪ್ರಿಯಗೊಳಿಸಲು ನವೀನ ಕ್ರಿಯಾತ್ಮಕ ಕ್ಷೇತ್ರ ಪ್ರಯೋಗಗಳ ಕಾರ್ಯಕ್ರಮಗಳನ್ನು ನಡೆಸುವುದು
   - ಸ್ಥಳೀಯ ಅಭಿವೃದ್ಧಿಗೆ ಸೂಕ್ತವಾದ ಸಂಶೋಧನೆಯನ್ನು ಕೈಗೊಳ್ಳುವುದು.
2. **ಸಣ್ಣ ನೀರಾವರಿ**
   - ಅಂತರ್ಜಲ ನೀರಿನ ಮೂಲಗಳ ಅಭಿವೃದ್ಧಿ
   - ಒಂದಕ್ಕಿಂತ ಹೆಚ್ಚು ತಾಲೂಕು ಪಂಚಾಯತ್‌ಗಳನ್ನೊಳಗೊಂಡ ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣ ಮತ್ತು ನಿರ್ವಹಣೆ
   - ನಿಯಂತ್ರಣ ವಲಯಗಳ ಅಭಿವೃದ್ಧಿ
3. **ಪಶು ಸಂಗೋಪನೆ ಹೈನುಗಾರಿಕೆ, ಕೋಳಿ ಸಾಕಣೆ**
   - ಜಿಲ್ಲಾ ಮಟ್ಟದಲ್ಲಿ ಪಶು ಆಸ್ಪತ್ರೆಗಳು ಮತ್ತು ಲ್ಯಾಬ್‌ಗಳ ಸ್ಥಾಪನೆ ಮತ್ತು ನಿರ್ವಹಣೆ
   - ಜಿಲ್ಲಾ ಹಾಲು ಸಹಕಾರಿ ಸಂಘಗಳಿಗೆ ಉತ್ತೇಜನ
   - ಜಿಲ್ಲಾ ಮಟ್ಟದ ತರಬೇತಿಗಳನ್ನು ನಡೆಸುವುದು.
   - ಔಷಧಗಳು, ವೈದ್ಯಕೀಯ ನೆರವು ಮತ್ತು ಲಸಿಕೆಗಳನ್ನು ಒದಗಿಸುವುದು
4. **ಸಾಮಾಜಿಕ ಅರಣ್ಯ**
   - ಗ್ರಾಮ ಪಂಚಾಯತ್ ಮತ್ತು ತಾಲುಕು ಪಮಚಾಯತ್‌ಗಳಿಗೆ ಉಪಯೋಗವಾಗುವಂತೆ ಸಾಮಾಜಿಕ ಅರಣ್ಯ ಮತ್ತು ಜೀವ ವೈವಿಧ್ಯದ ನಿರ್ವಹಣೆಗೆ ಮಾರ್ಗದರ್ಶಿ ಸೂತ್ರಗಳ ರಚನೆ
5. **ಪ್ರವಾಸೋದ್ಯಮ**

- ಜಿಲ್ಲೆಗಳ ತಾಲೂಕುಗಳಲ್ಲಿರುವ ಪ್ರವಾಸಿ ತಾಣಗಳ ಗುರುತಿಸುವಿಕೆ ಮತ್ತು ಅಭಿವೃದ್ಧಿ
- ಜಿಲ್ಲೆಯ ಪ್ರವಾಸೋದ್ಯಮ ಚಟುವಟಿಕೆಗಳ ನೀತಿ ಮತ್ತು ನಿಯಮಗಳನ್ನುರೂಪಿಸುವುದು
- ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
- ಪ್ರವಾಸಿ ತಾಣಗಳನ್ನು ಆಕರ್ಷಣಿಯವಾಗಿ ಮಾಡುವುದು ಮತ್ತು ಅದರ ನಿರ್ವಹಣೆ
- ಪ್ರವಾಸಿ ಮಾರ್ಗದರ್ಶಿ, ಹಸಿರು ಪೋಲೀಸ್ ಮತ್ತು ಜೀವರಕ್ಷಕ ವ್ಯಕ್ತಿಗಳನ್ನು ಪ್ರವಾಸಿ ತಾಣಗಳಲ್ಲಿ ನೇಮಕ ಮಾಡುವುದು, ಪ್ರವಾಸಿ ತಾಣಗಳಲ್ಲಿ ಪ್ರವೇಶ ಶುಲ್ಕ ಮತ್ತು ನಿಲುಗಡೆಯ ಶುಲ್ಕಗಳ ಸಂಗ್ರಹಣೆ

6. **ಸಣ್ಣ ಕೈಗಾರಿಕೆಗಳು ಮತ್ತು ಗ್ರಾಮೀಣ ಉದ್ಯಮಗಳು – ಖಾದಿ, ಕರಕುಶಲ ಕೈಗಾರಿಕೆ, ಗ್ರಾಮೋದ್ಯಮಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು ಮತ್ತು ಇತರ ಕೃಷಿಯೇತರ ಚಟುವಟಿಕೆಗಳು**.
   - ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆ ಮತ್ತು ಉಸ್ತುವಾರಿ
   - ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಕಾರ್ಯತಂತ್ರಗಳನ್ನು ರೂಪಿಸುವುದು.
   - ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಮಟ್ಟದಲ್ಲಿ ತರಬೇತಿಗಳನ್ನು ನಡೆಸಲು ಅಗತ್ಯವಿರುವ ತಾಂತ್ರಿಕ ಮಾಹಿತಿ ಮತ್ತು ಇತರ ಸಂಬಂಧಿತ ಜ್ಞಾನ ಮತ್ತು ಕೌಶಲ್ಯಗಳನ್ನು ಒದಗಿಸುವುದು.
   - ಖಾದಿ, ಗ್ರಾಮೀಣ ಕೃಗಾರಿಕೆಗಳು, ಗುಡಿ ಕೈಗಾರಿಕೆಗಳು ಮತ್ತು ಕರ ಕುಶಲ ಕೈಗಾರಿಕೆಗಳಿಗೆ ಮಾರುಕಟ್ಟೆಯ ಸ್ಥಾಪನೆ
   - ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಎಲ್ಲಾ ಕೇಂದ್ರ ಮಂಡಳಿಗಳ ಮತ್ತು ರಾಜ್ಯ ಮಂಡಳಿಗಳ ಯೋಜನೆಗಳನ್ನು ಅನುಷ್ಟಾನಗೊಳಿಸಲು ಸಂಪರ್ಕಗಳ ಅಭಿವೃದ್ಧಿ
   - ಜಿಲ್ಲಾ ಮಟ್ಟದ ಕೈಗಾರಿಕೀಕರಣದ ಕಾರ್ಯಕ್ರಮಗಳನ್ನು ನಡೆಸುವುದು
   - ಕೈಗಾರಿಕೆಗಳ ಅಭೀವೃದ್ಧಿಗೆ ಸಾಲ ಯೋಜನೆಗಳ ಅನುಷ್ಟಾನ
7. **ಗ್ರಾಮೀಣ ವಸತಿ**
   - ವಸತಿ ಹಣಕಾಸುಗಳ ಕ್ರೋಢೀಕರಣ ಮತ್ತು ಗ್ರಾಮ ಪಂಚಾಯತ್‌ಗಳಿಗೆ ವಿತರಣೆ
   - ಸಂಪರ್ಕ ಸಂಸ್ಥೆಯಂತೆ ಕಾರ್ಯನಿರ್ವಹಿಸುವುದು
   - ಜಿಲ್ಲಾ ಮಟ್ಟದ ವಸತಿ ಸಹಕಾರಿ ಸಂಘಗಳಿಗೆ ಉತ್ತೇಜನ
8. **ಕುಡಿಯುವ ನೀರು ಪೂರೈಕೆ**
   - ಮೆಗಾ(ದೊಡ್ಡ ಗಾತ್ರದ) ಕುಡಿಯುವ ನೀರು ಯೋಜನೆ ಅಥವಾ ಬಹು ತಾಲುಕು ಕುಡಿಯುವ ನೀರು ಯೋಜನೆಯ ಸ್ಥಾಪನೆ
   - ಕುಡಿಯುವ ನೀರು ಪರೀಕ್ಷಾ ಲ್ಯಾಬ್‌ಗಳ ರಚನೆ
   - ಗ್ರಾಮ ಪಂಚಾಯತ್ ಮತ್ತು ತಾಲೂಕು ಪಮಚಾಯತ್‌ಗಳ ನೀರು ಪೂರೈಕೆ ಯೋಜನೆಗಳಿಗೆ ಹಣಕಾಸಿನ ನೆರವು
9. **ಸಾರ್ವಜನಿಕ ಕಾಮಗಾರಿಗಳು, ನಗರ ಮತ್ತು ಗ್ರಾಮಾಂತರ ಯೋಜನೆಗಳು (ರಸ್ತೆ, ಸೇತುವೆ, ಹಾಯ್ಗಡ, ಜಲಮಾರ್ಗ, ಇತರ ಸಂಪರ್ಕಿಸುವ ಮಾರ್ಗಗಳು)**
   - ಜಿಲ್ಲಾ ಮಟ್ಟದಲ್ಲಿ ಯೋಜನೆ, ನಿರ್ಮಾಣ ಮತ್ತು ನಿರ್ವಹಣೆ
     - ರಸ್ತೆಗಳು, ರಾಜ್ಯ ಹೆದ್ದಾರಿಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳು
     - ಸೇತುವೆಗಳು, ಮೋರಿಗಳು
     - ಒಂದಕ್ಕಿಂತ ಹೆಚ್ಚು ತಾಲೂಕುಗಳನ್ನು ಸಂಪಕಿಸುವ ಅಥವಾ ಹಾದು ಹೋಗುವ, ಜಿಲ್ಲೆಯ ಮುಖ್ಯ ರಸ್ತೆಗಳು ಮತ್ತು ಎಲ್ಲಾ ರಸೆಗಳು

- ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳ ನಿರ್ಮಾಣ ಮತ್ತು ನಿರ್ವಹಣೆಗೆ ತಂತ್ರಜ್ಞಾನಗಳನ್ನು ಒದಗಿಸುವುದು
- ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳ ಬೇಡಿಕೆಗೆ ಅನುಗುನವಾಗಿ ಹೊನ ತಂತ್ರಜ್ಞಾನ ಮತ್ತು ವಿನ್ಯಾಸಗಳನ್ನು ಪರಿಚಯಿಸುವುದು.
- ಬಹು ತಾಲೂಕುಗಳ ಸಾರ್ವಜನಿಕ ಸೌಲಭ್ಯಗಳಾದ ಮಾರುಕಟ್ಟೆ, ಆಟದ ಮೈದಾನ, ಕ್ರೀಡಾಂಗಣ ಮುಂತಾದವುಗಳ ನಿರ್ಮಾಣ ಮತ್ತು ನಿರ್ವಹಣೆ.
- ಜಿಲ್ಲಾ ಮಟ್ಟದಲ್ಲಿ ಕಟ್ಟಡ, ಬಡಾವಣೆ, ನಿವೇಶನ ಇತ್ಯಾದಿ ನಗರ ಮತ್ತು ಗ್ರಾಮಾಂತರ ಯೋಜನೆಗಳ ನೀತಿ ನಿಯಮಗಳನ್ನು ರೂಪಿಸುವುದು.

10. **ಗ್ರಾಮೀಣ ವಿದ್ಯುದೀಕರಣ,/ವಿದ್ಯುತ್ ಮತ್ತು ಇಂಧನ**

- ಅತಿ ದೊಡ್ಡ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಇಂಧನ ಘಟಕಗಳ ಯೋಜನೆ, ಸ್ಥಾಪನೆ ಮತ್ತು ನಿರ್ವಹಣೆ
- ಉಳಿಕೆಯ ವಿದ್ಯುತ್ ಅಥವಾ ಶಕ್ತಿಯ ಇಂಧನಗಳ ಇತರರಿಗೆ ಮಾರಟ

11. **ಬಡತನ ನಿವಾರಣೆ**

- ಗ್ರಾಮ ಪಂಚಾಯತ್‌ಗಳಿಂದ ಗುರುತಿಸಲ್ಪಟ್ಟ ಬಡವರ ಕೌಶಲ್ಯಗಳ ಉನ್ನತೀಕರಣ
- ತಾಂತ್ರಿಕ ತರಬೇತಿ ಕಾಯ್ರಕ್ರಮಗಳನ್ನು ನಡೆಸುವುದು
- ಗ್ರಾಮ ಪಂಚಾಯತ್‌ನ ಸಹಭಾಗಿತ್ವದಲ್ಲಿ ಉದ್ಯೋಗ ಖಾತ್ರಿ ಯೋಜನೆಗಳಿಗೆ ಯೋಜನೆ ಮತ್ತು ಅನುಷ್ಠಾನ

12. **ಸಾರ್ವಜನಿಕ ವಿತರಣಾ ವ್ಯವಸ್ಥೆ**
13. **ವಿಪತ್ತು ನಿರ್ವಹಣೆ**

- ವಿಪತ್ತು ನಿರ್ವಹಣೆಗೆ ಅಗತ್ಯ  ಮೂಲಸೌಕರ್ಯಗಳನ್ನು ರಚಿಸುವುದು

14. **ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ, ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ)**

- ಜಿಲ್ಲಾ ಮಟ್ಟದಲ್ಲಿ ಸಾಂಪ್ರದಾಯಿಕ ಅಸಾಂಪ್ರದಾಯಿಕ ಶಿಕ್ಷಣದ ಯೋಜನೆ ಸ್ಥಾಪನೆ ಮತ್ತು ನಿರ್ವಹಣೆ.
- ಪದವಿ ಪೂರ್ವ ಕಾಲೇಜುಗಳ, ಐಟಿಐ, ಪಾಲಿಟೆಕ್ನಿಕ್ ಕಾಲೇಜುಗಳ ಪ್ರಸ್ಥಾವನೆಗಳ ತಯಾರಿ ಮತ್ತು ಮಾನ್ಯತೆಗೆ ಸೂಕ್ತ ಪ್ರಾಧಿಕಾರಕ್ಕೆ ರವಾನೆ
- ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ಐಟಿಐ, ಪಾಲಿಟೆಕ್ನಿಕ್ ಕಾಲೇಜುಗಳ ನಿರ್ಮಾಣ ಮತ್ತು ಉಸ್ತುವಾರಿ
- ಜಿಲ್ಲಾ ಪಂಚಾಯತ್ ಸಂಸ್ಥೆಗಳಡಿಯಲ್ಲಿ ವಸತಿ ನಿಲಯಗಳ ಯೋಜನೆ ಸ್ಥಾಪನೆ ಮತ್ತು ನಿರ್ವಹಣೆ
- ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯದ ಪ್ರಯೋಜಕ ಕಾರ್ಯಕ್ರಮಗಳ ಸಂಯೋಜನೆ
- ಗ್ರಾಮೀಣ ಕೈಗಾರಿಕೆಯ ತರಬೇತಿ ಮತ್ತು ವೃತ್ತಿಪರ ತರಬೇತಿಗಳ ಸ್ಥಾಪನೆ ಮತ್ತು ನಿರ್ವಹಣೆ ಸರ್ಕಾರಿ
- ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳಿಗೆ ತಾಂತ್ರಿಕ ಮಾಹಿತಿ, ಪರಿಕರಗಳಳು, ಹಣಕಾಸಿನ ನೆರವು ಒದಗಿಸುವುದು.
- ಪದವಿ ಪೂರ್ವ ಶಿಕ್ಷಣ ಪಡೆಯುವವರಿಗೆ, ವಸತಿ ಶಾಲೆಗಳು, ಹಿಂದುಳಿದ ವರ್ಗಗಳು ಮತ್ತು ಗುಂಪುಗಳು, ಹೆಣ್ಣುಮಕ್ಕಳು, ವಿಶೇಷ ಸಾಮರ್ಥ್ಯದ ಮಕ್ಕಳು, ಅಲ್ಪ ಸಂಖ್ಯಾತ ಮಕ್ಕಳಿಗೆ ವೃತ್ತಿಪರ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣದ ಯೋಜನೆ, ಅನುಷ್ಟಾನ ಮತ್ತು ನಿರ್ವಹಣೆ
- ಜಿಲ್ಲಾ ಪಂಚಾಯತ್ ಉಸ್ತುವಾರಿಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಧ್ಯಕಾಲಿಕ ಶಿಕ್ಷಕರು (stop gap teachers), ಅರೆಕಾಲಿಕ ಮತ್ತು ಗೌರವ ಶಿಕ್ಷಕರ ನೇಮಕ

- ವಿಶೇಷ ಸಾಮರ್ಥ್ಯದ ಮಕ್ಕಳಿಗಾಗಿ ವಿಶೇಷ ಶಾಲೆಗಳು ಮತ್ತು ವಸತಿ ನಿಲಯಗಳ ಸ್ಥಾಪನೆ ಮತ್ತು ಉಸ್ತುವಾರಿ.

15. **ಗ್ರಂಥಾಲಯಗಳು**
    - ಜಿಲ್ಲಾ ಪಂಚಾಯತ್ ಗ್ರಂಥಾಲಯಗಳು ಮತ್ತು ವಾಚನಾಲಯಗಳ ಯೋಜನೆ, ಅನುಷ್ಠಾನ ಮತ್ತು ಸ್ಥಾಪನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆ
    - ಜಿಲ್ಲಾ ಗ್ರಂಥಪಾಲಕರು ಮತ್ತು ಇತರ ಸಿಬ್ಬಂದಿಗಳ ನೇಮಕ
16. **ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**
    - ಯುವಕ/ಯುವತಿಯರೂ ಸೇರಿದಂತೆ, ಸಾಂಸ್ಕೃತಿಕ ತಂಡಗಳು ಅವರ ಪ್ರತಿಭೆ ಮತ್ತು ಕಲೆಗಳ ಅನಾವರಣಕ್ಕೆ ಉತ್ತಮ ವೇದಿಕೆಯನ್ನು ನಿರ್ಮಾಣ ಮಾಡುವುದು.
    - ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ ಮತ್ತು ಕಲಾ ಜಾತ್ರೆಗಳನ್ನು ನಡೆಸುವುದು.
    - ಜಿಲ್ಲಾ ಮಟ್ಟದ ಯುಜನೋತ್ಸವಗಳನ್ನು ಸಂಘಟಿಸುವುದು.
    - ಜಿಲ್ಲಾ ಮಟ್ಟದಲ್ಲಿ ಕ್ರೀಡಾ ಶಾಲೆಗಳ ಸ್ಥಾಪನೆ
    - ಗ್ರಾಮೀಣ ಕಲೆ ಮತ್ತು ಸಂಸ್ಕೃತಿಗಳ ಚಟುವಟಿಕೆಗಳ ಉತ್ಪನ್ನಗಳು ಮತ್ತು ಗುಡಿಗಾರಿಕೆಗಳ ದಾಖಲಾತಿ ಮತ್ತು ನಿರ್ವಹಣೆ
    - ಅವನತಿ ಹೊಂದುತ್ತಿರುವ ಗ್ರಾಮೀಣ ಪಾರಂಪರಿಕ ಕಲೆ, ಸ್ಮಾರಕ, ಸಾಂಸ್ಕೃತಿಕ ಪ್ರಾಕಾರಗಳ ದಾಖಲಾತಿ, ರಕ್ಷಣೆ ಮತ್ತು ಅಭಿವೃದ್ಧಿ
    - ಅಸ್ಪೃಶ್ಯತೆಯ ವಿರುದ್ಧ, ಜಾತಿ, ಕೋಮುವರ್ಗ ಸೌಹಾರ್ದತೆ, ಮಹಿಳೆ ಮಕ್ಕಳು, ವಿಶೇಷ ಸಾಮರ್ಥ್ಯವುಳ್ಳವರು, ಅಲ್ಪಸಂಖ್ಯಾತರ ಬಗ್ಗೆ ವಿಶೇಷ ಕಾಯಿದೆ, ಕಾರ್ಯಕ್ರಮ ನಡೆಸುವುದರ ಮೂಲಕ ಒಳ್ಳೆಯ ಸಾಧನೆ ಮಾಡಿದ ಗ್ರಾಮ ಪಂಚಾಯತ್‌ಗಳನ್ನು ಗುರುತಿಸಿ ವಾರ್ಷಿಕ ಪುರಸ್ಕಾರ ನೀಡುವುದು
17. **ಜಾನುವಾರು ಮೇಳಗಳು ಸೇರಿದಂತೆ ಮಾರುಕಟ್ಟೆ ಮತ್ತು ಜಾತ್ರೆ**
    - ಜಿಲ್ಲಾ ಮಟ್ಟದ ಸಾರ್ವಜನಿಕ ಮಾರುಕಟ್ಟೆಗಳ ಸ್ಥಾಪನೆ ಮತ್ತು ಉಸ್ತುವಾರಿ
    - ಜಾನುವಾರು ಜಾತ್ರೆ, ಸೇರಿ ಇತರ ಜಾತ್ರೆ ಪರೀಶೆ, ಉತ್ಸವಗಳನ್ನು ನಡೆಸಲು ನೀತಿ ನಿಯಮಗಳನ್ನು ರೂಪಿಸುವುದು
18. **ಸಾರ್ವಜನಿಕ ಆರೋಗ್ಯ (ಆರೋಗ್ಯ, ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು), ಕುಟುಂಬ ಕಲ್ಯಾಣ**
    - ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಪ್ರಸ್ತಾವನೆಗಳನ್ನು ಸೂಕ್ತ ಪ್ರಾಧಿಕಾರ ಅಥವಾ ಸರ್ಕಾರಕ್ಕೆ ಅನುಮತಿಗಾಗಿ ಕಳಿಸುವುದು.
    - ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಆಸ್ಪತ್ರೆಗಳ ನಿರ್ವಹಣೆ
    - ಆರೋಗ್ಯ ಸೇವೆಗಳ ನಿರ್ವಹಣೆ ಮತ್ತು ನೈರ್ಮಲ್ಯ ಕಾರ್ಯಕ್ರಮಗಳ ವ್ಯವಸ್ಥೆಗಳು/ಸಲಕರಣೆಗಳ ಸ್ಥಾಪನೆಗೆ ಗ್ರಾಮ ಪಂಚಾಯತ್‌ಗಳಿಗೆ ನಿರಂತರ ನೆರವು.
    - ವಿಶೇಷ ವರ್ಗಗಳಿಗೆ ಮತ್ತು ವಿಶೇಷ ಮತ್ತು ಮಾನಸಿಕ ಸವಾಲುಳ್ಳವರ ಸೇವೆಗೆ ಸೌಲಭ್ಯಗಳು ಮತ್ತು ಕೇಂದ್ರಗಳ ನಿರ್ಮಾಣ.
    - ಗ್ರಾಮ ಪಂಚಾಯತ್‌ಗಳಿಗೆ ನೀಡಲು ತಾಲೂಕು ಮಟ್ಟದಲ್ಲಿ ಲ್ಯಾಬೋರೇಟರಿಗಳು ಮತ್ತು ವಿಚಾರಣಾ (ಪರೀಕ್ಷಣಾ) ಸೇವೆಗಳ ಸ್ಥಾಪನೆ.
    - ಜಿಲ್ಲಾ ಮಟ್ಟದ ತಾಯ್ತನ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಉಸ್ತುವಾರಿ.
    - ಕೇಂದ್ರ ಮತ್ತು ರಾಜ್ಯ ಪ್ರಯೋಜಕತ್ವದ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಸಂಯೋಜಿಸುವುದು.
    - ಜಿಲ್ಲಾ ಮಟ್ಟದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನ

- ಗ್ರಾಮ ಪಂಚಾಯತ್, ಕ್ಲಸ್ಟರ್ ಮಟ್ಟ, ತಾಲೂಕು, ಜಿಲ್ಲಾ ಮಟ್ಟದವರೆಗೆ ಆರೋಗ್ಯ ಕ್ಷೇತ್ರಗಳಲ್ಲಿ ಅಗತ್ಯವಿರುವ ಪರಿಕರ, ಸಾಮಗ್ರಿ, ಔಷಧಗಳನ್ನು ಸಂಗ್ರಹಿಸಿ ವಿತರಿಸುವುದು
- ಜಿಲ್ಲಾ ಮಟ್ಟದಲ್ಲಿ ಸೋಂಕು, ಸಾಂಕ್ರಾಮಿಕ ಜಾಡ್ಯ (ರೋಗ) ನಿವಾರಣೆಗೆ ಹಾಗೂ ತಡೆಗೆ ಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು

19. **ನೈರ್ಮಲ್ಯ**

- ಜಿಲ್ಲಾ ನೈರ್ಮಲ್ಯ ಯೋಜನೆಗಳ ಕ್ರೋಢೀಕರಣ
- ಗ್ರಾಮ ಪಂಚಾಯತ್ ತಾಲೂಕು ಪಂಚಾಯತ್‌ಗಳಿಗೆ ಅಗತ್ಯ ನೆರವು
- ಇದರ ನಿಯಮ ಮತ್ತು ಮೌಲ್ಯಮಾಪನಗಳ ಬಗ್ಗೆ ಜಿಲ್ಲಾ ನೀತಿ ಮತ್ತು ನಿಯಮಗಳನ್ನು ರೂಪಿಸುವುದು,

20. **ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಸಾಮರ್ಥ್ಯದ ಮತ್ತು ಮಾನಸಿಕ ಸವಾಲುಗಳುಳ್ಳವರ ಕಲ್ಯಾಣ**

- ಕಾರ್ಯಕ್ರಮಗಳ ಅನುಷ್ಠಾನಕ್ಕೆ ತಾಂತ್ರಿಕ ಮಾಹಿತಿಯನ್ನು ಒದಗಿಸುವುದು.
- ತಾಲೂಕು ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಸಶಕ್ತತೆ ಕಾರ್ಯಕ್ರಮಗಳನ್ನು ನಡೆಸಲು ಪ್ರೋತ್ಸಾಹ
- ಶಾಲಾ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಕಾರ್ಯಕ್ರಮಗಳಿಗೆ ಉತ್ತೇಜನ
- ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಸ್ಥಾಪನೆ, ನಿರ್ವಹಣೆ ಮತ್ತು ಮೇಲ್ವಿಚಾರಣೆ

21. **ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಮತ್ತು ಇತರೇ ಹಿಂದುಳಿದ ವರ್ಗದವರ ಅಭಿವೃದ್ಧಿ**

- ಜಿಲ್ಲಾ ಮಟ್ಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹಾಗೂ ಹಿಂದುಳಿದ ಸಮುದಾಯದವರ ಆಶ್ರಮ ಶಾಲೆಗಳ ಮತ್ತು ವಸತಿ ನಿಲಯಗಳ ಯೋಜನೆ, ಸ್ಥಾಪನೆ ಮತ್ತು ನಿರ್ವಹಣೆ
- ಮೆಟ್ರಿಕ್ ನಂತರದ ವಸತಿ ನಿಲಯಗಳ ಸ್ಥಾಪನೆ ಮತ್ತು ನಿರ್ವಹಣೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಹಿಂದುಳಿದ ಸಮುದಾಯದವರಿಗೆ ಅಲ್ಪಾವಧಿ ತರಬೇತಿಯ ಉಸ್ತುವಾರಿ.
- ಜಿಲ್ಲಾ ಮಟ್ಟದಲ್ಲಿ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಸ್ಥಾಪನೆ ಮತ್ತು ನಿರ್ವಹಣೆ

22. **ಎಲ್ಲಾ ಪ್ರಮಾಣ ಪತ್ರಗಳ ವಿತರಣೆ**

- ಜಿಲ್ಲಾ ಮಟ್ಟದ ಅಂಕಿ-ಅಂಶಗಳ ಕ್ರೋಢೀಕರಣ

23. **ಅಂಕಿ-ಅಂಶಗಳ ನಿರ್ವಹಣೆ**

- ತಾಲೂಕು ಪಂಚಾಯತ್‌ನ ಯೋಜನೆಗಳ ಆಧಾರದ ಮೇಲೆ ಜಿಲ್ಲೆಯ ಮುನ್ನೋಟದ ಯೋಜನೆಗಳನ್ನು ಕ್ರೋಢಿಕರಿಸುವುದು ಮತ್ತು ಅಂತಿಮಗೊಳಿಸುವುದು.

24. **ಯೋಜನೆ**

- ಜಿಲ್ಲಾ ಮಟ್ಟದ ಯೋಜನೆಯ ಸಮಿತಿಯ ರಚನೆ, ತಾಲೂಕು ಪಂಚಾಯತ್‌ಗಳಿಂದ ಸ್ವೀಕರಿಸಿದ ಯೋಜನೆಗಳ ಕ್ರೋಢೀಕರಣ, ಜಿಲ್ಲಾ ಮಟ್ಟದ ಯೋಜನೆಗಳ ತಯಾರಿ, ಅಂಗೀಕಾರ
- ಯೋಜನೆಗೆ ಬೇಕಾಗುವ ಮಾಹಿತಿ, ಅಂಕಿ-ಅಂಶಗಳ ಸಂಗ್ರಹಣೆಗೆ, ಗ್ರಾಮ ಪಂಚಾಯತ್‌ಗೆ ತಾಂತ್ರಿಕ ತಜ್ಞರ ನೆರವನ್ನು ಒದಗಿಸುವುದು.

25. **ಸಹಕಾರ**

- ಜಿಲ್ಲಾಮಟ್ಟದ ಸಹಕಾರ ಸಂಘಗಳ ನೋಂದಾವಣೆ ಮತ್ತು ಮೇಲ್ವಿಚಾರಣೆ

26. **ಗ್ರಾಮೀಣ ವಾತಾವರಣ ಮತ್ತು ಪರಿಸರ**

- ಗ್ರಾಮೀಣ ವಾತಾವರಣ ಮತ್ತು ಪರಿಸರ ರಕ್ಷಣೆಗಾಗಿ ಗ್ರಾಮ ಪಂಚಾಯತ್‌ಗಳಿಗೆ ಮತ್ತು ತಾಲೂಕು ಪಂಚಾಯತ್‌ಗಳಿಗೆ ತಾಂತ್ರಿಕ ನೆರವು ಒದಗಿಸುವುದು.

27. **ಜ್ಞಾನ ನಿರ್ವಹಣೆ**

- ಜಿಲ್ಲಾ ಅಂಕಿ-ಅಂಶಗಳ ಸಂಗ್ರಹ ಮತ್ತು ಕ್ರೋಢೀಕರಣ ಮತ್ತು ಅಂಕಿ-ಅಂಶಗಳ ನಿರ್ವಹಣೆ
- ಜಿಲ್ಲೆಯ ಪರಂಪರೆ, ಸಂಸ್ಕೃತಿ, ಇತಿಹಾಸಗಳ ದಾಖಲಾತಿ
- ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿ ಅಧ್ಯಯನ ಮತ್ತು ಸಮೀಕ್ಷೆಗಳನ್ನು ನಡೆಸಿ ದಾಖಲಿಸುವುದು.
- ಮಾನವ ಅಭಿವೃದ್ಧಿ ಸೂಚ್ಯಂಕಗಳ ನಿಯತಕಾಲಿಕ ಗಣತಿ
- ಸಮಗ್ರ ಮಾಹಿತಿ ಮತ್ತು ಅಂಕಿ-ಅಂಶಗಳು ಜನರಿಗೆ ಸಿಗುವಂತೆ ಮಾಡುವುದು

28. **ಸಮುದಾಯದ ಆಸ್ತಿ ನಿರ್ವಹಣೆ**

ಜಿಲ್ಲಾ ಮುಖ್ಯ ಕಛೇರಿಗಳ ಸಮಸ್ತ ಆಸ್ತಿಗಳ ನಕ್ಷೆ, ಅಳತೆಗಳು, ಅಂಕಿ-ಅಂಶಗಳು ಸಮಗ್ರ ದಾಖಲಾತಿಗಳನ್ನು ಮಾಡಿ ದಾಖಲೆಗಳ ನಿರ್ವಹಣೆ ಮತ್ತು ಉಸ್ತುವಾರಿ.